05 April 2026 Sunday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬದುಕಿನಲ್ಲಿ ವ್ಯಕ್ತಿ
ಆಗಾಗ ಸೋಲುವುದು ಒಳ್ಳೆಯದು!
ಅದರಿಂದ ಅಹಂಕಾರ ನೆತ್ತಿಗೇರುವುದಿಲ್ಲ!
-ಸ್ನೇಹಾ ಆನಂದ್

info.varthaman@gmail.com


ನೀರಿನ ದರ ಏರಿಕೆ ವಾಪಾಸ್‌ಗೆ ಮಾಜಿ ಮೇಯರ್ ಶಿವಕುಮಾರ್ ಒತ್ತಾಯ ಪುಟ ಸಂ. 2


ಪ್ರಚಾರಕ್ಕೆ ಸೇವೆ ಸಲ್ಲದು: ಮಲ್ಲೇಶ್ ಗುರೂಜಿ ಪುಟ ಸಂ. 3


ಬಾಲಕಾರ್ಮಿಕರಿಂದ ದುಡಿಸಿಕೊಳ್ಳುವವರ ವಿರುದ್ಧ ಕ್ರಮ ಜರುಗಿಸಿ: ಡಿಸಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 140 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ರೈಲ್ವೆ ಯೋಜನೆ ವಿಳಂಬ: ರಾಜ್ಯವೇ ಕಾರಣ

**ಲೋಕಸಭೆಯಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ**



**ಬೆಂಗಳೂರು:** ಬೆಂಗಳೂರು ಉಪನಗರ ರೈಲು ಯೋಜನೆ ವಿಳಂಬಕ್ಕೆ ಕರ್ನಾಟಕ ರಾಜ್ಯ ಸರ್ಕಾರವೇ ಕಾರಣ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಟೀಕಿಸಿದರು.

ಲೋಕಸಭೆಯಲ್ಲಿ ಈ ಕುರಿತು ಮಾಹಿತಿ ನೀಡಿರುವ ಅವರು, ಬೆಂಗಳೂರು ಉಪನಗರ ರೈಲು ಯೋಜನೆ ವಿಳಂಬಕ್ಕೆ ಪುಟ 2ಕ್ಕೆ

## ಬಾವಿಗೆ ಬಿದ್ದ ಕಾರು: 9 ಮಂದಿ ಸಾವು




**ಮಹಾರಾಷ್ಟ್ರ:** ನಾಸಿಕ್ ಜಿಲ್ಲೆಯ ದಿಂಡೋರಿ ತಾಲ್ಲೂಕಿನಲ್ಲಿ ಕಾರೊಂದು ಬಾವಿಗೆ ಉರುಳಿ ಬಿದ್ದ ಪರಿಣಾಮ ಮಕ್ಕಳು ಸೇರಿ ಒಂದೇ ಕುಟುಂಬದ 9 ಮಂದಿ ದುರ್ಮಣಕ್ಕೀಡಾಗಿದ್ದಾರೆ. ಅಪಘಾತಕ್ಕೆ ಇನ್ನೂ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಶುಕ್ರವಾರ ತಡರಾತ್ರಿ ಕಾರ್ಯಕ್ರಮ ಮುಗಿಸಿ ವಾಪಸ್ ಬರುವಾಗ ಕಾರು ಬಾವಿಗೆ ಬಿದ್ದು ಘಟನೆ ಸಂಭವಿಸಿದೆ. ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ಮುಂದುವರಿದಿದೆ ಎಂದು ತಿಳಿದುಬಂದಿದೆ.

# ಹೊಸ ಬಡಾವಣೆ: ಡ್ರೋನ್ ಸರ್ವೆ

## ಮೈಸೂರು ನಗರದಲ್ಲಿ 2113 ಎಕರೆ ಬಡಾವಣೆ ನಿರ್ಮಾಣ ಯೋಜನೆಗೆ ಡಿಸಿಯಿಂದ ಚಾಲನೆ

**ಮೈಸೂರು:** ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವ್ಯಾಪ್ತಿಯ 2113 ಎಕರೆ ಪ್ರದೇಶದಲ್ಲಿ 50:50 ಅನುಪಾತದಲ್ಲಿ ಹೊಸ ಬಡಾವಣೆ ನಿರ್ಮಾಣ ಯೋಜನೆಗೆ ಶನಿವಾರ ಡ್ರೋನ್ ಸರ್ವೆ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಇಲವಾಲ ಸಮೀಪದ ದೊಡ್ಡಮಾರಗೌಡನಹಳ್ಳಿ, ಕಮರವಳ್ಳಿ, ಬೊಮ್ಮೇನಹಳ್ಳಿ ಹಾಗೂ ನಾಗವಾಲ ಗ್ರಾಮಗಳ ವ್ಯಾಪ್ತಿಯಲ್ಲಿ ಹೊಸ ಬಡಾವಣೆಗೆ ನಿರ್ಮಾನ ಆಗಲಿದೆ. ಭೂಮಿಯ ಅಳತೆ, ಗಡಿ ಗುರುತು ಹಾಗೂ ಯೋಜನಾ ರೂಪರೇಷೆಗಳನ್ನು ತ್ವರಿತವಾಗಿ ಸಿದ್ಧಗೊಳಿಸುವ ಉದ್ದೇಶ





ದಿಂದ ಡ್ರೋನ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಮತ್ತು ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಸರ್ವೆಗೆ ಹಸಿರು ನಿಶಾನೆ ತೋರಿಸಿದರು. ಡ್ರೋನ್ ಸರ್ವೆ ಕಾರ್ಯದ ಉಸ್ತುವಾರಿ ವಹಿಸಿರುವ ಎ.ಆರ್.ವಿ. ಎನ್ವಿರೋನ್ ಮೆಂಟ್ ಕನ್ಸರ್ ವೇಷನ್ ಕೇರ್ ಲಿಮಿಟೆಡ್ ಸಂಸ್ಥೆಯ ಉಪಾಧ್ಯಕ್ಷ ರಾಜಗುರು, ಸೂಪರಿಂಟೆಂಡೆಂಟ್ ಇಂಜಿನಿಯರ್, ಎಂಡಿಎ ಕಾರ್ಯದರ್ಶಿ, ನಗರ ಯೋಜನಾ ಸದಸ್ಯರು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿಶೇಷ ಭಾಗವಹಿಸಿದ್ದರು ಮತ್ತು ಭೂಮಿಯ ಮಾಲೀಕರು ಸಹ ಇದ್ದರು.


## ಸಿದ್ದುವಿನಷ್ಟು ಸೋಮಾರಿ ಅಲ್ಲ

**ಸಿದ್ದರಾಮಯ್ಯ ನಡವಳಿಕೆ ಬೇಸರ ತಂದಿದೆ: ವಿ.ಸೋಮಣ್ಣ ಟೀಕೆ**

**ದಾವಣಗೆರೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಷ್ಟು ಪ್ರವೀಣ, ಸೋಮಾರಿ ನಾನಲ್ಲ. ತಕ್ಕಮಟ್ಟಿಗೆ ಬುದ್ಧಿ ಇದ್ದು ಕೆಲಸವನ್ನೂ ಮಾಡಿದ್ದೇನೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ತಿರುಗೇಟು ನೀಡಿದರು.

ಕೆಲಸವಿಲ್ಲದ ಸಚಿವ ಸೋಮಣ್ಣ ಎಂಬ ಸಿದ್ದರಾಮಯ್ಯ ಆರೋಪಕ್ಕೆ ಶನಿವಾರ ಪ್ರತಿಕ್ರಿಯೆ ನೀಡಿದ ಸಚಿವ ಸೋಮಣ್ಣ, ರಾಜ್ಯಕ್ಕೆ ತಾವು ತಂದಿರುವ ಅನುದಾನ, ಮಾಡಿದ ಕೆಲಸಗಳ ಬಗ್ಗೆ ವಿವರಣೆ ನೀಡಿದರು. ಕುಕ್ಕೆಸುಬ್ರಹ್ಮಣ್ಯ ಸಮೀಪದ ರೈಲ್ವೆ ಹಳಿಯ ಸುರಂಗವನ್ನಾದರೂ ಒಮ್ಮೆ ವೀಕ್ಷಿಸಿ ಎಂದು ಸವಾಲು ಹಾಕಿದರು.

ಸಿದ್ದರಾಮಯ್ಯ ಹಾಗೂ ನಾನು ಒಂದೇ ಗರಡಿಯಲ್ಲಿ ಬೆಳೆದವರು. ಒಟ್ಟಿಗೆ ಸಚಿವರಾಗಿ ಕೆಲಸ ಮಾಡಿದ್ದೇವೆ. ಅವರ ಇತ್ತೀಚಿನ ನಡವಳಿಕೆಗಳು ಬೇಸರ ತರಿಸುತ್ತಿವೆ. ದೇಶದಲ್ಲಿ ಆಗಿರುವ ತಾಂತ್ರಿಕ ಬದಲಾವಣೆಗಳು ಅವರಿಗೆ ಅರ್ಥವಾಗಿಲ್ಲ. ಈಗ ಅವರು ಕೇವಲ ನಿದ್ದೆ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.



ರೈಲ್ವೆ ಸಚಿವನಾದ ಬಳಿಕ ದಕ್ಷಿಣ ಭಾರತದಲ್ಲಿ 18 ಹೊಸ ರೈಲು ಸಂಚಾರ ಆರಂಭಿಸಿವೆ. 62 ನಿಲ್ದಾಣಗಳಲ್ಲಿ ರೈಲು ನಿಲುಗಡೆಗೆ ವ್ಯವಸ್ಥೆ ಮಾಡಿದ್ದೇನೆ. 24 ರೈಲುಗಳ ಸಂಚಾರ ಮತ್ತೊಂದು ಸ್ಥಳಕ್ಕೆ ವಿಸ್ತರಣೆಯಾಗಿವೆ. ಚಿಕ್ಕಜಾಜೂರು–ಬಳ್ಳಾರಿ ಜೋಡಿರೈಲು ಮಾರ್ಗ ನಿರ್ಮಾಣ ಶೀಘ್ರ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು. ಪುಟ 2ಕ್ಕೆ



### ತುಮಕೂರು–ದಾವಣಗೆರೆ ರೈಲು ಶೀಘ್ರವೇ ಆರಂಭ

**ತುಮಕೂರು– ಚಿತ್ರದುರ್ಗ– ದಾವಣಗೆರೆ ನೇರ ರೈಲು ಮಾರ್ಗದ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದೆ. 2027ರ ಮಾರ್ಚ್ ವೇಳೆಗೆ ದಾವಣಗೆರೆ–ಚಿತ್ರದುರ್ಗ ನಡುವೆ ರೈಲು ಸಂಚರಿಸಲಿದೆ ಎಂದು ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ತಿಳಿಸಿದರು. ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಹಳಿ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಚಿತ್ರದುರ್ಗ ತಾಲ್ಲೂಕಿನ ಕೆಲವೆಡೆ ಕೊಂಚ ವಿಳಂಬವಾಗುತ್ತಿದೆ. ಹಂತ ಹಂತವಾಗಿ ಕಾಮಗಾರಿ ಮುಗಿಸಿ ತುಮಕೂರಿನವರೆಗೆ ರೈಲು ಸಂಚರಕ್ಕೆ ಮುಕ್ತಗೊಳಿಸಲಾಗುವುದು ಎಂದು ಹೇಳಿದರು.**

## ಮಿತಿಮೀರಿದ ಆಟೋ ಗ್ಯಾಸ್ ಸಮಸ್ಯೆ


**ರಾಜ್ಯದ ಎಲ್ಲೆಡೆ ನೋಸ್ಟಾಕ್ ಬೋರ್ಡ್: ಚಾಲಕರ ಪರದಾಟ**

**ಬೆಂಗಳೂರು:** ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲೆಡೆ ಆಟೋ ಗ್ಯಾಸ್ ಸಮಸ್ಯೆ ಮಿತಿಮೀರಿದೆ. ಯಾವುದೇ ಬಂಕ್‌ಗೆ ಹೋದರೂ ಗ್ಯಾಸ್ ಸಿಗದೇ ಚಾಲಕರು ಪರದಾಡುವಂತಾಗಿದೆ. ಬಂಕ್‌ಗಳಲ್ಲಿ ನೋ ಸ್ಟಾಕ್ ಬೋರ್ಡ್ ಹಾಕಲಾಗಿದೆ.

**ಒಂದು ಆಟೋಗೆ 500 ರೂ. ಗೆ ಮಾತ್ರ ಗ್ಯಾಸ್**

ಬೆಂಗಳೂರಿನಲ್ಲಿ ಬೆರಳೆಣಿಕೆಯ ಬಂಕ್‌ಗಳಲ್ಲಿ ಮಾತ್ರ ಆಟೋ ಗ್ಯಾಸ್ ಸಿಗುತ್ತಿದೆ. ಅದೂ ಒಂದು ಆಟೋಗೆ 500 ರೂ.ಗೆ ಮಾತ್ರ ಗ್ಯಾಸ್ ಹಾಕಲಾಗುತ್ತಿದೆ. ಅದಕ್ಕೂ ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲಬೇಕಾಗಿದೆ. ಮತ್ತೆ ಪೂರೈಕೆ ಆಗಿಲ್ಲದ ಕಾರಣ ಸಾಕಷ್ಟು ಗ್ಯಾಸ್ ಬಂಕ್‌ಗಳು ಬಂದ್ ಆಗಿವೆ.

ಮಂಡ್ಯದಲ್ಲಿ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿವೆ. ಶುಕ್ರವಾರ ರಾತ್ರಿವರೆಗೆ ಮಂಡ್ಯದ ಎಲ್‌ಪಿಜಿ ಬಂಕ್‌ಗಳಲ್ಲಿ ಇದ್ದ ಸ್ಟಾಕ್ ಅನ್ನು ನೀಡಲಾಗುತ್ತಿತ್ತು. ಆದರೆ ಈಗ ಸ್ಟಾಕ್ ಖಾಲಿಯಾಗಿದೆ. ಹೀಗಾಗಿ ಮಂಡ್ಯ ನಗರದ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿವೆ. ನಮ್ಮ ಗೋಳನ್ನು ಕೇಳುವ



ವರು ಯಾರು ಇಲ್ಲ, ಆಟೋ ಓಡಿಸಿದರೆ ನಮ್ಮ ಹೊಟ್ಟೆ ತುಂಬುತ್ತಿತ್ತು. ಆದರೆ ಇದೀಗ ನಾವು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ನಮ್ಮ ಸಮಸ್ಯೆಯನ್ನು ಬೇಗ ಬಗೆಹರಿಸಿ ಮೊದಲು ದೊರೆಯುತ್ತಿದ್ದ ಎಲ್‌ಪಿಜಿ ಬೆಲೆಯಲ್ಲಿ ನೀಡಬೇಕೆಂದು ಆಟೋ ಚಾಲಕರು ಆಗ್ರಹಿಸಿದ್ದಾರೆ. ರಾಜ್ಯದ ವಿವಿಧೆಡೆ ಆಟೋ ಗ್ಯಾಸ್ ಸಮಸ್ಯೆ ಉಲ್ಬಣಗೊಂಡಿದ್ದು, ಎಲ್‌ಪಿಜಿಗಾಗಿ ಆಟೋ ಚಾಲಕರು ಪರದಾಡುವಂತಾಗಿದೆ. ಮತ್ತೊಂದೆಡೆ ಗ್ಯಾಸ್ ದರ ಏರಿಕೆ ಖಂಡಿಸಿ ಚಾಲಕರು ಪ್ರತಿಭಟನೆ ನಡೆಸಿದ್ದಾರೆ.

## ಐಪಿಎಲ್ ಟಿಕೆಟ್ ಗಾಗಿ ಶಾಸಕರ ಪಿಎಗಳ ಸಾಲು!



**ಬೆಂಗಳೂರು:** ರಾಜ್ಯದಲ್ಲಿ ಗ್ಯಾಸ್ ಸಿಗುತ್ತಿಲ್ಲವೆಂದು ಆಟೋ ಚಾಲಕರು ಗೋಳಾಡುತ್ತಿದ್ದಾರೆ. ಗ್ಯಾಸ್‌ಗಾಗಿ ರಾತ್ರಿಯಿಡೀ ಕ್ಯೂ ನಿಲ್ಲುತ್ತಿದ್ದಾರೆ. ಮತ್ತೊಂದು ಕಡೆ ನಮ್ಮ ಜನ ಪ್ರತಿನಿಧಿಗಳ ಮೋಜು–ಮಸ್ತಿಗೆ ಮಾತ್ರ ಬರ ಇಲ್ಲ. ಐಪಿಎಲ್ ಟಿಕೆಟ್ ಪಡೆಯೋಕೆ ತಮ್ಮ ಪಿಎಗಳನ್ನೇ ಕ್ಯೂ ನಿಲ್ಲಿಸಿದ್ದಾರೆ ನಮ್ಮ ಶಾಸಕರು.

ಪ್ರತಿ ಐಪಿಎಲ್ ಪಂದ್ಯಕ್ಕೆ ಶಾಸಕರಿಗೆ ಉಚಿತವಾಗಿ 3 ಟಿಕೆಟ್ ಕೊಡುವ ಮಾತುಕತೆ ಸರ್ಕಾರ – ಕೆಎಸ್‌ಸಿಎ ಮಧ್ಯೆ ಆಗಿದೆ. ನಾಳೆ ಬೆಂಗಳೂರು ಮತ್ತು ಚೆನ್ನೈ ಪಂದ್ಯವಿದೆ. ಈ ಪಂದ್ಯದ ಟಿಕೆಟ್‌ಗಾಗಿ ಶಾಸಕರ ಪಿಎಗಳು ಸ್ಪೀಕರ್ ಕಚೇರಿ ಮುಂದೆ ಪುಟ 2ಕ್ಕೆ

## ಗ್ಯಾಸ್ ಸಮಸ್ಯೆ ಪರಿಹರಿಸಿ: ಕೇಂದ್ರಕ್ಕೆ ಡಿಕೆಶಿ ಆಗ್ರಹ

**ಬೆಂಗಳೂರು:** ರಾಜ್ಯದಲ್ಲಿ ಎಲ್‌ಪಿಜಿ ಅಭಾವದಿಂದ ಆಟೋ ಚಾಲಕರು ಸಮಸ್ಯೆಗೆ ಸಿಲುಕಿದ್ದಾರೆ. ಇದರಿಂದ ಸಂಚಾರ ವ್ಯವಸ್ಥೆಯ ಮೇಲೆ ಪರಿಣಾಮ ಉಂಟಾಗಿದೆ. ಹೊಟೇಲ್ ಉದ್ಯಮ ಕೂಡಾ ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಸಮಸ್ಯೆ ಬಗೆಹರಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ಎಲ್‌ಪಿಜಿ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಆದರೆ, ಈ ವಿಚಾರದಲ್ಲಿ ವಿಫಲವಾಗಿದೆ. ಈ ವಿಚಾರದ ಬಗ್ಗೆ ಬಿಜೆಪಿಯವರು ಈವರೆಗೂ ಯಾಕೆ ಮಾತನಾಡುತ್ತಿಲ್ಲ. ನಮ್ಮಿಂದ ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದು ಕಿಡಿಕಾರಿದರು.

ಕಳೆದ ಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪ ಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದೆ. ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ಮನೆ ಮನೆಗೆ ಹೋಗಿ ಗ್ಯಾರಂಟಿ ಯೋಜನೆಗಳ ಬಗ್ಗೆ ಮನವರಿಕೆ ಮಾಡುತ್ತಿದ್ದಾರೆ. ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಕೂಡ ಈ ಬಾರಿ ಕಾಂಗ್ರೆಸ್ ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆ ಆಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ ಎಂದು ಹೇಳಿದರು.

## ಕಾರು ಅಪಘಾತ: ಬಾಲಕಿ ಸಾವು


**ಚಿಕ್ಕಬಳ್ಳಾಪುರ:** ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಕಾರು ಡಿಕ್ಕಿಯಾಗಿ ಪಲ್ಟಿಯಾದ ಪರಿಣಾಮ 9 ವರ್ಷದ ಬಾಲಕಿ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಕೊತ್ತನೂರು ಗ್ರಾಮದ ಬಳಿ ನಡೆದಿದೆ. ಅಂಕಿತಾ (9) ಮೃತ ಬಾಲಕಿ.



ಕಲುಬುರಗಿ ಜಿಲ್ಲೆಯ ಚಿಂಚೋಳಿಯ ರಾಜೇಂದ್ರ ಹಾಗೂ ಭಾಗ್ಯಮ್ಮ ದಂಪತಿ ಮಗಳು ಅಂಕಿತಾ ಮೃತಪಟ್ಟ ಬಾಲಕಿ. ಕುಟುಂಬ ಹೊಸಕೋಟೆಯಲ್ಲಿ ವಾಸವಾಗಿತ್ತು. ಜಾತ್ರೆಯಿಂದ ಕಾರಿನಲ್ಲಿ ವಾಪಸ್ಸಾಗುವಾಗ ಅಪಘಾತ ಸಂಭವಿಸಿದೆ. ಉಳಿದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## ಗ್ಯಾಸ್ ಸಮಸ್ಯೆಗೆ ಕೇಂದ್ರವನ್ನು ಬೈಯೋದು ಬೇಡ: ಎಚ್‌ಡಿಕೆ

**ಕೊಪ್ಪಳ:** ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಬಗ್ಗೆ ಕೇಂದ್ರ ಸರ್ಕಾರವನ್ನು ಬೈಯುವುದು ಒಳ್ಳೆದಲ್ಲ. ರಾಜ್ಯ ಸರ್ಕಾರವೂ ಆಟೋ ಚಾಲಕರ ಮೇಲೆ ತೆರಿಗೆ ವಿಧಿಸಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.



ರಾಜ್ಯದಲ್ಲಿ ಆಟೋ ಚಾಲಕರಿಗೆ ಗ್ಯಾಸ್ ಸಮಸ್ಯೆಯಾಗಿದೆ. ಈ ಸಮಸ್ಯೆ ನಾವು ಯಾರೂ ಬಯಸಿ ಬಂದಿರೋದಲ್ಲ. ಯುದ್ಧದ ಹಿನ್ನೆಲೆಯಲ್ಲಿ ಕೆಲ ಸಮಸ್ಯೆಗಳು ಉದ್ಭವವಾಗಿವೆ. ಯಾವುದೇ ಸರ್ಕಾರ ಇದ್ದರೂ ಇಂತಹ ಪರಿಸ್ಥಿತಿಯಲ್ಲಿ ಜನ ಸಾಮಾನ್ಯರಿಗೆ ತೊಂದರೆ ಆಗದಂತೆ ನೋಡಿ ಕೊಳ್ಳೋದು ನಮ್ಮ ಧರ್ಮ. ಆದರೆ, ಈಗಿನ ಪರಿಸ್ಥಿತಿ ಪುಟ 2ಕ್ಕೆ

## ಇರಾನ್ ಪರಮಾಣು ಸ್ಥಾವರದ ಮೇಲೆ ದಾಳಿ

**ಟೆಹ್ರಾನ್:** ದಕ್ಷಿಣ ಇರಾನ್‌ನ ಬುಶೆಹ್ರ್ ಪರಮಾಣು ವಿದ್ಯುತ್ ಸ್ಥಾವರದ ಬಳಿ ಶನಿವಾರ ಅಮೆರಿಕ–ಇಸ್ರೇಲ್ ಜಂಟಿ ದಾಳಿ ನಡೆಸಿವೆ. ಒಬ್ಬ ವ್ಯಕ್ತಿ ಸಾವನ್ನಪ್ಪಿದ್ದಾರೆ. ಇದಕ್ಕೂ ಮೊದಲು, ಇರಾನ್‌ನ ನೈರುತ್ಯ ಖುಜೆಸ್ತಾನ್ ಪ್ರಾಂತ್ಯದ ಮಹ್‌ಶಹರ್ ಪೆಟ್ರೋಕೆಮಿಕಲ್ ವಲಯದ ಮೇಲೆ ನಡೆದಿದ್ದ ದಾಳಿಯಲ್ಲಿ ಐವರು ಗಾಯಗೊಂಡಿದ್ದರು.


ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿ ಅಮೆರಿಕದ ಎರಡನೇ ಯುಎಸ್ ವಾಯುಪಡೆಯ ವಿಮಾನ ಎಫ್–15 ಫೈಟರ್ ಜೆಟ್‌ಅನ್ನು ಇರಾನ್ ಹೊಡೆದುರುಳಿಸಿದೆ. ಅದೇ ಸಮಯದಲ್ಲಿ ಎ–10 ವಾರ್ಥಾಗ್ ಹಾರ್ಮುಜ್ ಜಲಸಂಧಿಯ ಬಳಿ ಪತನಗೊಂಡಿತು ಎಂದು ಅಮೆರಿಕದ ಅಧಿಕಾರಿಗಳನ್ನು ಉಲ್ಲೇಖಿಸಿ ಹೇಳಲಾಗಿದೆ. ಪೈಲಟ್ ಅನ್ನು ರಕ್ಷಿಸಲಾಗಿದೆ.



ಎಫ್–15 ಜೆಟ್‌ನಲ್ಲಿದ್ದ ಇಬ್ಬರು ಸಿಬ್ಬಂದಿಯಲ್ಲಿ ಒಬ್ಬರನ್ನು ರಕ್ಷಿಸಲಾಗಿದೆ ಎಂದು ಅಮೆರಿಕದ ಅಧಿಕಾರಿ ತಿಳಿಸಿದ್ದಾರೆ. ಅಮೆರಿಕದ ಮಿಲಿಟರಿ ವಿಮಾನದ ನಷ್ಟವು ಇರಾನ್ ಜೊತೆಗಿನ ರಾಜತಾಂತ್ರಿಕ ಮಾತುಕತೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

## ಅಮೆರಿಕಾ ಜೊತೆ ಮಾತುಕತೆ ಪ್ರಸ್ತಾಪ ತಿರಸ್ಕರಿಸಿದ ಇರಾನ್

**ಟೆಹ್ರಾನ್:** ಮಧ್ಯಪ್ರಾಚ್ಯದ ಯುದ್ಧದಲ್ಲಿ ಅಮೆರಿಕಗೆ ಮುಖಭಂಗ ಆದಂತಾಗಿದೆ. ಯುದ್ಧವನ್ನು ರಾಜತಾಂತ್ರಿಕ ಮೂಲಕ ನಿಲ್ಲಿಸಲು ಸಜ್ಜಾಗಿದ್ದ ಅಮೆರಿಕಗೆ ಈಗ ಇರಾನ್ ಮತ್ತೊಂದು ತಿರುಗೇಟು ನೀಡಿದೆ. ಮಾತುಕತೆ ವಿಚಾರವನ್ನು ಇರಾನ್ ತಿರಸ್ಕರಿಸಿದೆ. ಮಧ್ಯಸ್ತಿಕೆ ವಹಿಸಿ ಬೀಗುತ್ತಿದ್ದ ಪಾಕಿಸ್ತಾನಕ್ಕೂ ಈಗ ಜಾಗತಿಕವಾಗಿ ಮುಖಭಂಗವಾಗಿದೆ.



ಇರಾನ್ ಒಡ್ಡುತ್ತಿರುವ ಪ್ರತಿರೋಧಕ್ಕೆ ಅಮೆರಿಕದಂತ ಅಮೆರಿಕವೇ ಬಳಲಿ ಬೆಂಡಾಗಿ ಹೋಗಿದೆ. ಯಾವ ಇರಾನ್‌ನಲ್ಲಿ ಆಡಳಿತ ಬದಲಾವಣೆ ಮಾಡಬೇಕು ಎಂದು ಅಮೆರಿಕ ನುಗ್ಗಿತ್ತೋ ಅದೇ ಇರಾನ್‌ನ ಪ್ರತಿರೋಧದಿಂದ ಅಮೆರಿಕದ ಮಿಲಿಟರಿಯ ಪ್ರಮುಖ ಅಧಿಕಾರಿಗಳ ತಲೆದಂಡವಾಗುತ್ತಿದೆ. ಈಗ ಗಾಯದ ಮೇಲೆ ಬರೆ ಎಂಬಂತೆ ಇರಾನ್‌ನನ್ನು ಪಾಕಿಸ್ತಾನದ ಮಧ್ಯಸ್ತಿಕೆಯಲ್ಲಿ ಕದನ ವಿರಾಮದ ಪುಟ 2ಕ್ಕೆ

## ಹಿಂದಿಗೆ ಗ್ರೇಡ್: ಅಧಿಕಪ್ರಸಂಗ ಬಿಡಿ

**ರಾಜ್ಯಪಾಲರ ಪತ್ರಕ್ಕೆ ಕರವೇ ನಾರಾಯಣಗೌಡ ಆಕ್ರೋಶ**

**ಬೆಂಗಳೂರು:** ನಮ್ಮ ನೆಲದಲ್ಲಿ ನಿಮಗೆ ಐಶಾರಾಮಿ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದೇವೆ. ಕನ್ನಡಿಗರ ತೆರಿಗೆ ದುಡ್ಡಿನಲ್ಲಿ ರಾಜಭವನ ನಡೆಯುತ್ತಿದೆ. ಅಧಿಕಪ್ರಸಂಗ ಮುಂದುವರೆಸಿದರೆ ಗಂಟುಮೂಟೆ ಕಟ್ಟಿಕೊಂಡು ನಿಮ್ಮ ರಾಜ್ಯಕ್ಕೆ ತೊಲಗಿ ಎಂದು ರಾಜ್ಯಪಾಲರ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.



ರಾಜ್ಯಪಾಲರಿಗೆ ಪತ್ರ ಬರೆದಿರುವ ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಅವರು, ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಸರ್ಕಾರದ ನಿರ್ಧಾರವನ್ನು ಮರುಪರಿಶೀಲಿಸುವಂತೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಸರ್ಕಾರದ ನಿರ್ಧಾರವನ್ನು ಮರುಪರಿಶೀಲಿಸುವಂತೆ ನೀವು ಹೇಳಿದ್ದೀರಿ. ನಿಮ್ಮ ಈ ಹಸ್ತಕ್ಷೇಪ ಒಕ್ಕೂಟ ವ್ಯವಸ್ಥೆಯನ್ನು ಅಣಕಿಸುವಂತೆ ಇದೆ. ನಿಮ್ಮ ಅಧಿಕಪ್ರಸಂಗವನ್ನು ಕರ್ನಾಟಕದ ಜನತೆ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ರಾಜ್ಯಪಾಲರು ಸರ್ಕಾರದ ಪದನಿಮಿತ್ತ ಮುಖ್ಯಸ್ಥರು ಮಾತ್ರ ಎಂಬುದನ್ನು ನೀವು ಮರೆತಿದ್ದೀರಿ. ನೀವು ನಮ್ಮಿಂದ ನೇರವಾಗಿ ಆಯ್ಕೆಯಾದ ಜನಪ್ರತಿನಿಧಿಯಲ್ಲ. ಒಂದು ಸರ್ಕಾರ ಬಹುಮತದೊಂದಿಗೆ ಸದೃಢವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ದೈನಂದಿನ ಆಡಳಿತದಲ್ಲಿ ಮೂಗು ತೂರಿಸಲು ನಿಮಗೆ ಯಾವುದೇ ನೈತಿಕ ಅಧಿಕಾರವಿಲ್ಲ, ಸಾಂವಿಧಾನಿಕ ಹೊಣೆಗಾರಿಕೆಯಿಲ್ಲ. ಅದು ನಿಮ್ಮ ವ್ಯಾಪ್ತಿಯ ಕೆಲಸವೂ ಅಲ್ಲ ಎಂದು ಟೀಕಿಸಿದ್ದಾರೆ.

ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಬದಲಾವಣೆ ಮಾಡುವ ಸಂವಿಧಾನಬದ್ಧ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಸರ್ಕಾರ ಈಗ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತರುತ್ತಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಇದರ ಸಾಧಕ ಬಾಧಕಗಳನ್ನು ನಮ್ಮ ಜನಪ್ರತಿನಿಧಿಗಳು ನೋಡಿಕೊಳ್ಳುತ್ತಾರೆ. ಬೆಂಗಳೂರು ಪುಟ 2ಕ್ಕೆ

# ಸಾಮಾಜಿಕ ಭದ್ರತೆಯೂ ಅಭಿವೃದ್ಧಿಯೇ

## ಬಿಜೆಪಿ ನಾಯಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

**ಬಾಗಲಕೋಟೆ:** ಅಭಿವೃದ್ಧಿಯೆಂದರೆ ಕೇವಲ ರಸ್ತೆ, ಸೇತುವೆ, ಕಟ್ಟಡ ನಿರ್ಮಿಸುವುದು ಮಾತ್ರವಲ್ಲ. ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸುವುದು ಕೂಡ ಅಭಿವೃದ್ಧಿಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಿಂದ ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಕಾರ್ಯಕ್ರಮ ಕೊಟ್ಟಿದ್ದೇವೆ. ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದೆ. ಆದರೆ, ಗ್ಯಾರಂಟಿ ಯೋಜನೆಗಳು ಸಾಮಾಜಿಕ ಬದ್ಧತೆಯನ್ನು ಒದಗಿಸುವ ಹೂಡಿಕೆಯಾಗಿವೆ. ಇದೂ ಕೂಡ ಅಭಿವೃದ್ಧಿಯೇ ಎಂದು ಹೇಳಿದರು.

ಸಾಮಾಜಿಕ ಯೋಜನೆಗಳನ್ನು ಘೋಷಿಸಿದ ಮೇಲೆ ಬಿಜೆಪಿ ಅಂದಿನಿಂದ ಇಂದಿನವರೆಗೆ ವಿರೋಧಿಸುತ್ತಲೇ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೇರಿದಂತೆ



ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಹೇಳಿಕೊಂಡು ಬಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಜಾರಿಯಲ್ಲಿದ್ದು 2026 ಮಾರ್ಚ್ 24ರವರೆಗೆ 1.31 ಲಕ್ಷ ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೇವೆ. ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಗೆ ಸೋಲಿನ ಭಯ

### ಆರ್ಥಿಕ ಶಿಸ್ತು ಮೀರಿಲ್ಲ

ಯಾವುದೇ ರಾಜ್ಯ ಸಿಕ್ಕಾಪಟ್ಟೆ ಸಾಲ ಮಾಡಲು ಸಾಧ್ಯವಿಲ್ಲ. ಇಷ್ಟೇ ಸಾಲ ಕೂಡಬೇಕೆಂದು ಕೇಂದ್ರ ಸರ್ಕಾರದ ಆರ್ಥಿಕ ಇಲಾಖೆ ನಿಗದಿ ಮಾಡುತ್ತದೆ. ಈ ವಿಷಯ ಬಿಜೆಪಿಗೆ ತಿಳಿದಿದೆಯೋ ಇಲ್ಲವೋ. ಸಾಲ ಮಾಡಿದ್ದೇನೆ ಎನ್ನುವುದು ಹಸಿ ಸುಳ್ಳು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡಗಳನ್ನು ಮೀರಿಲ್ಲ. ಆರ್ಥಿಕ ಶಿಸ್ತು ಕಾಪಾಡಿಕೊಂಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಬಿಜೆಪಿಯವರು ರಾಜ್ಯದಲ್ಲಿ ಒಂಭತ್ತು ವರ್ಷಗಳು ಅಧಿಕಾರದಲ್ಲಿದ್ದರೂ, ರಾಜ್ಯದ ಅಭಿವೃದ್ಧಿ ಕೈಗೊಂಡಿಲ್ಲ. 2013ರ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ನೀಡಲಾಗಿದ್ದ 165 ಭರವಸೆಗಳಲ್ಲಿ 158

# ಮೊದಲ ಪುಟದಿಂದ

## ರೈಲ್ವೆ ಯೋಜನೆ: ರಾಜ್ಯವೇ ಕಾರಣ

ರಾಜ್ಯ ಸರ್ಕಾರದ ಭೂಸ್ವಾಧೀನ ಪ್ರಕ್ರಿಯೆ ವಿಳಂಬವೇ ಪ್ರಮುಖ ಕಾರಣ. ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್–4 ಯೋಜನೆಗೆ ಅಗತ್ಯವಿರುವ 57 ಎಕರೆ ಭೂಮಿಯಲ್ಲಿ ರಾಜ್ಯ ಸರ್ಕಾರದ ಅಧೀನದಲ್ಲಿರುವ ಕೆ–ರೈಡ್ ಕೇವಲ 7.8 ಎಕರೆ ಭೂಮಿಯನ್ನು ಮಾತ್ರ ವಶಪಡಿಸಿಕೊಂಡಿದೆ. ಇದೇ ಕಾರಣದಿಂದ ಯೋಜನೆ ವಿಳಂಬವಾಗುತ್ತಿದೆ ಎಂದು ತಿಳಿಸಿದರು. 148.17 ಕಿಮೀ ಉದ್ದದ ಮಹತ್ವಾಕಾಂಕ್ಷಿ ಯೋಜನೆಗೆ ರೂ.15,767 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ತಲಾ ಶೇ.20 ಹೂಡಿಕೆ ಮಾಡುತ್ತಿವೆ. ಉಳಿದ ಶೇ.60 ಹಣವನ್ನು ಸಾಲದ ಮೂಲಕ ಸಂಗ್ರಹಿಸಲಾಗುತ್ತಿದೆ. ಈಗಾಗಲೇ ಈ ಯೋಜನೆಗೆ ರೂ.2,659 ಕೋಟಿ ವೆಚ್ಚವಾಗಿದೆ ಎಂದು ಮಾಹಿತಿ ನೀಡಿದರು. ಬೆಂಗಳೂರು ನಗರ ಮತ್ತು ದೇವನಹಳ್ಳಿ (41.4 ಕಿಮೀ) ನಡುವಿನ ಕಾರಿಡಾರ್–1 (ಸಂಪಿಗೆ) ಗಾಗಿ ಜೋಡಣೆ ಯೋಜನೆಗಳನ್ನು ಅನುಮೋದಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಪ್ರಾರಂಭಿಸಿದೆ. ಸಿಗ್ನಲಿಂಗ್ ಮತ್ತು ಟೆಲಿಕಮ್ಯುನಿಕೇಶನ್ ಸೇರಿದಂತೆ ವಿದ್ಯುತ್ ವ್ಯವಸ್ಥೆಗಳ ಸ್ಥಳಾಂತರ ಕಾರ್ಯವೂ ನಡೆಯುತ್ತಿದೆ. ಬೈಯ್ಯಪ್ಪನಹಳ್ಳಿ– ಚಿಕ್ಕಬಾಣಾವರ (25 ಕಿಮೀ) ಕಾರಿಡಾರ್‌ನಲ್ಲಿ ಭೂಸ್ವಾಧೀನ ಪೂರ್ಣಗೊಂಡಿದೆ. ನಿಲ್ದಾಣ ನಿರ್ಮಾಣಕ್ಕಾಗಿ ಪ್ರತ್ಯೇಕ ಒಪ್ಪಂದಗಳನ್ನು ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

## ಪ್ರಸ್ತಾಪ ತಿರಸ್ಕರಿಸಿದ ಇರಾನ್

ಮಾತುಕತೆಯ ಮೇಜಿಗೆ ಕರೆದಿತ್ತು. ಆದರೆ ಅದಕ್ಕೂ ಕೂಡ ಇರಾನ್ ಸೊಪ್ಪು ಹಾಕಿಲ್ಲ. ನಾವು ಅಮೆರಿಕದ ಅಧಿಕಾರಿಗಳೊಂದಿಗೆ ಮಾತುಕತೆಗೆ ಕೂರಲು ಸಿದ್ಧವಿಲ್ಲ. ಇಸ್ಲಾಮಾಬಾದ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಇರಾನ್‌ಗೆ ಒಪ್ಪಿಗೆ ಇಲ್ಲ ಎಂದು ಕಡ್ಡಿ ಮುರಿದಂತೆ ತಿಳಿಸಿದೆ.

## ಸಾಮಾಜಿಕ ಭದ್ರತೆಯೂ ಅಭಿವೃದ್ಧಿಯೇ

ಕಾಡುತ್ತಿದೆ ಎಂದು ತಿರುಗೇಟು ನೀಡಿದರು. ಜೊತೆಗೆ, ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಪೊಲೀಸ್ ವ್ಯವಸ್ಥೆಗೆ ವೆಚ್ಚ, ಎಸ್ ಸಿಎಸ್ ಪಿ/ ಟಿಎಸ್ ಪಿ ಯೋಜನೆಗಳಿಗೆ ವೆಚ್ಚ ಮಾಡುವುದನ್ನು ಕಡಿಮೆ ಮಾಡಿಲ್ಲ. ಕಳೆದ ವರ್ಷದಲ್ಲಿ 42,000 ಕೋಟಿ ವೆಚ್ಚ ಮಾಡಿದ್ದರೆ, ಈ ವರ್ಷ 44,000 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. ಅಭಿವೃದ್ಧಿ ಕೆಲಸಗಳ್ಯಾವುವೂ ಕುಂಠಿತವಾಗಿಲ್ಲ ಎಂದರು. ಸಿದ್ದರಾಮಯ್ಯ ಸಾಲ ಮಾಡಿದ್ದಾರೆ ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಆರ್ಥಿಕ ಹೊಣೆಗಾರಿಕೆ ಕಾಯ್ದೆಯನ್ನು ಬಿಜೆಪಿ ಸರಿಯಾಗಿ ಓದಿಕೊಳ್ಳಬೇಕು. ರಾಜ್ಯಗಳು ಆರ್ಥಿಕ ಸಂಕಷ್ಟದಲ್ಲಿದ್ದಾಗ 2002ರಲ್ಲಿ ಜಾರಿಯಾದ ಈ ಕಾಯ್ದೆಯ ಪ್ರಕಾರ ಮೂರು ಮಾನದಂಡಗಳನ್ನು ಈಡೇರಿಸಬೇಕು. ಆರ್ಥಿಕ ಕೊರತೆ ಜಿಡಿಪಿಯ ಶೇ.3ರ ಒಳಗಿರಬೇಕು. 33 ಲಕ್ಷದ 5500 ಲಕ್ಷ ಕೋಟಿ ಪೈಕಿ ಶೇ.25ರಷ್ಟು ಸಾಲವಿರಬೇಕು. ನಮ್ಮ ಸಾಲ 24.94 ರಲ್ಲಿದೆ. ಹೀಗಾಗಿ ಸಾಲ ಮಿತಿಮೀರಿಲ್ಲ. ಬಿಜೆಪಿ ನಾಯಕರು ಮತ್ತೊಮ್ಮೆ ಬಜೆಟ್ ಪುಸ್ತಕ ಓದಿಕೊಳ್ಳಲಿ ಎಂದು ಲೇವಡಿ ಮಾಡಿದರು.

## ಕೇಂದ್ರವನ್ನು ಬೈಯೋದು ಬೇಡ

ಮೋದಿ ನೇತೃತ್ವದಲ್ಲಿ ಜನಸಾಮಾನ್ಯರಿಗೆ ಬೇಕಾಗಿರೋ ವಸ್ತುಗಳನ್ನು ತರಲು ಅಲ್ಪಸ್ವಲ್ಪ ಮಟ್ಟಿಗೆ ಯಶಸ್ಸು ಕಾಣುತ್ತಿದ್ದಾರೆ. ಇವತ್ತು ಕಾಂಗ್ರೆಸ್‌ನವರು ಏನೇನೋ ಮಾತಾಡುತ್ತಿದ್ದಾರೆ. ಕೇಂದ್ರದಲ್ಲಿ ಯುಪಿಎ ಸರ್ಕಾರವೇ ಇದ್ದರೆ ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದರು.

## ಸಿದ್ದುವಿನಷ್ಟು ಸೋಮಾರಿ ಅಲ್ಲ

ನನೆಗುದಿಗೆ ಬಿದ್ದಿದ್ದ 11 ರೈಲ್ವೆ ಯೋಜ ನೆಗಳಿಗೆ 58,000 ಕೋಟಿ ಅನುದಾನ ನೀಡ ಲಾಗಿದೆ. ರಾಜ್ಯದ 61 ರೈಲು ನಿಲ್ದಾಣಗ ಳನ್ನು 1,900 ಕೋಟಿ

ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲಾಗಿದೆ. ರಾಜ್ಯದಲ್ಲಿ 11 ವರ್ಷದಲ್ಲಿ 1,657 ಕಿ.ಮೀ ರೈಲು ಮಾರ್ಗ ನಿರ್ಮಾಣ ಮಾಡಲಾಗಿದೆ. ರೈಲು ಮಾರ್ಗಗಳ ವಿದ್ಯುದೀಕರಣ ಶೇ 97 ರಷ್ಟು ಪೂರ್ಣಗೊಂಡಿದೆ. ಇನ್ನೊಬ್ಬರ ಬಗ್ಗೆ ಟೀಕೆ ಮಾಡುವಾಗ ಹಗುರವಾಗಿ ಮಾತನಾಡಬೇಡಿ ಎಂದು ಎಚ್ಚರಿಕೆ ನೀಡಿದರು.

## ಆರ್ಥಿಕ ಶಿಸ್ತು ಮೀರಿಲ್ಲ

ಭರವಸೆಗಳನ್ನು ಈಡೇರಿಸಲಾಗಿದೆ. ಬಿಜೆಪಿಯವರು ನೀಡಿದ ಭರವಸೆಗಳಲ್ಲಿ ಶೇ.10ರಷ್ಟು ಪ್ರಮಾಣವನ್ನು ಈಡೇರಿಸಲಿಲ್ಲ. ಆದ್ದರಿಂದ ಬಿಜೆಪಿಯವರು ಚುನಾವಣೆಯ ಸಂದರ್ಭದಲ್ಲಿ ಜನತೆಯ ಮುಂದೆ ಸತ್ಯ ನುಡಿಯಬೇಕೇ ಹೊರತು ಸುಳ್ಳು ಹೇಳಬಾರದು ಎಂದರು.

ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಯತ್ನಾಳ್ ಅವರನ್ನು ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವ ಬಿಜೆಪಿ ಹೀನಾಯ ಸ್ಥಿತಿಗೆ ತಲುಪಿದೆ. ಬಿಜೆಪಿಯವರು ಸೋಲಿನ ಭಯದಿಂದ ಇಂತಹ ಕೃತ್ಯಕ್ಕೆ ಕೈಹಾಕಿದ್ದಾರೆ. ಪ್ರತಿಪಕ್ಷಗಳ ಹೇಳಿಕೆಗಳಿಗೆ ನಾವು ಪ್ರತಿಕ್ರಿಯಿಸುವುದಿಲ್ಲ. ಸರ್ಕಾರದ ಕೆಲಸವನ್ನು ಜನರ ಮುಂದಿಡುತ್ತೇವೆ ಎಂದು ಸಿಎಂ ತಿಳಿಸಿದರು.

## ಹಿಂದಿಗೆ ಗ್ರೇಡ್: ಅಧಿಕಪ್ರಸಂಗ ಬಿಡಿ

ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘದವರು ನಿಮಗೆ ಕೊಟ್ಟಿದ್ದಾರೆ ಎನ್ನಲಾದ ಮನವಿಗೆ ತುರ್ತಾಗಿ ಪ್ರತಿಕ್ರಿಯಿಸಿರುವುದನ್ನು ಕೇಳಿ ಆಶ್ಚರ್ಯವಾಯಿತು. ಬೆಂಗಳೂರಿನಲ್ಲಿ ಇಂಥದ್ದೊಂದು ಸಂಘ ಇದೆ ಎಂಬುದೇ ನಮಗೆ ತಿಳಿದಿರಲಿಲ್ಲ. ಇಂಥ ಕುತಂತ್ರಗಳು ಕರ್ನಾಟಕಕ್ಕೆ ಹೊಸದೇನೂ ಅಲ್ಲ. ಮರೆಯಲ್ಲಿ ನಿಂತು ಬಾಣ ಬಿಡುವ ಈ ಹೇಡಿಗಳು ಬೀದಿಗೆ ಬರಲಿ ಎಂದು ಸವಾಲು ಹಾಕಿದ್ದಾರೆ.

## ಐಪಿಎಲ್‌ಗಾಗಿ ಕ್ಯೂ

ಕ್ಯೂ ನಿಂತು ಟಿಕೆಟ್ ಪಡೆದಿದ್ದಾರೆ. ಸ್ಪೀಕರ್ ಕಚೇರಿಯಲ್ಲಿ ಟಿಕೆಟ್ ಸಿಗುವುದರಿಂದ ಶಾಸಕರ ಸೂಚನೆ ಮೇರೆಗೆ ಕ್ಯೂ ನಿಂತು ಟಿಕೆಟ್ ಪಡೆದಿದ್ದಾರೆ. ಜನರ ಸಮಸ್ಯೆ ಕೇಳದ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್‌ಗಾಗಿ ವರ್ತನೆ ತೋರಿ ಸಿದ್ದು ವಿಪರ್ಯಾಸವೇ ಸರಿ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# 7ಕ್ಕೆ ಶರಣ ಸಾಹಿತ್ಯ ದತ್ತಿ ಪ್ರಶಸ್ತಿ



ಮೈಸೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ಏ.7 ರಂದು ಸಂಜೆ 5ಕ್ಕೆ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶಿವರಾತ್ರಿ ರಾಜೇಂದ್ರ ಸಭಾಂಗಣದಲ್ಲಿ ಶರಣ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ನಗರ ಘಟಕದ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಮಲಮ್ಮ ಮತ್ತು ಜಿ.ಎ. ಶಿವಲಿಂಗಯ್ಯ ಶರಣ ದತ್ತಿ ಪ್ರಶಸ್ತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್, ಹಿರಿಯ ಸಾಹಿತಿ ಗುಲ್ಬರ್ಗದ ಪ್ರೊ. ಕಲ್ಯಾಣರಾವ ಜಿ. ಪಾಟೀಲ್, ವಚನ ಸಾಹಿತ್ಯ ಸಂಶೋಧನೆಯಲ್ಲಿ ಪಿಎಚ್.ಡಿ ಪಡೆದಿರುವ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರದ ಡಾ. ದೇವಿಕಾ ಎಸ್. ಮತ್ತು ಹಾವೇರಿಯ ಡಾ. ಕಾಂತೇಶರೆಡ್ಡಿ ಗೋಡಿಹಾಳ ಅವರಿಗೆ ಪ್ರದಾನ ಮಾಡಲಾಗುವುದೆಂದರು. ಹಿರಿಯ ಸಾಹಿತಿ ಪ್ರೊ.ಸಿ.ಪಿ ಕೃಷ್ಣಕುಮಾರ್ ಪ್ರದಾನ ಮಾಡಲಿದ್ದು, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಡ್ಡಿಕೆರೆ ಗೋಪಾಲ್, ಪ್ರೊ.ಬಿ. ಜಯಪ್ರಕಾಶ್‌ಗೌಡ, ಡಾ.ಸಿ ಸೋಮಶೇಖರ್, ಪ್ರೊ.ಜಿ.ಎ. ಶಿವಲಿಂಗಯ್ಯ ಹಾಗೂ ತಾವು ವೇದಿಕೆಯಲ್ಲಿರುವುದಾಗಿ ತಿಳಿಸಿದರು. ಹೆಳವರಹುಂಡಿ ಸಿದ್ದಪ್ಪ, ನಂದೀಶ್, ಶೋಭಾರಾಣಿ ಜಯಪ್ರಕಾರ್ಶ, ಡಾ. ಲೋಕೇಶಪ್ಪ, ಡಾ. ಮುದ್ದುಮಲ್ಲೇಶ್ ಇದ್ದರು.

# ಹೊಸತನ ಅರಿಯಲು ಹಾಕಥಾನ್ ವೇದಿಕೆ



ಮೈಸೂರು: ಹೊಸ ಪ್ರಯತ್ನಗಳಲ್ಲಿ ತಪ್ಪುಗಳು ಸಹಜ. ಅದಕ್ಕೆ ಭಯಪಡದೆ ಮುಂದೆ ಸಾಗಬೇಕು. ಹಾಕಥಾನ್ ಹೊಸ ಅರಿಯಲು ಉತ್ತಮ ವೇದಿಕೆ ಎಂದು ವೆಲ್ಸ್ ಫಾರ್ಗೋ ಸಂಸ್ಥೆ ಉಪಾಧ್ಯಕ್ಷೆ ಸೌಮ್ಯ ಎನ್.ಸ್ವಾಮಿ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹ್ಯಾಕ್ ಒಲಂಪಿಕ್ಸ್‌ಗೆ ಚಾಲನೆ ನೀಡಿ ಮಾತನಾಡಿ, ಹ್ಯಾಕಥಾನ್‌ಗಳು ವಿದ್ಯಾರ್ಥಿಗಳಲ್ಲಿ ನವೋತ್ಸಾಹ ಮತ್ತು ಸಮಸ್ಯೆ ಪರಿಹಾರ ಕೌಶಲ್ಯ ಬೆಳೆಸುವ ವೇದಿಕೆಯಾಗಿದೆ ಎಂದರು. ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಪ್ರತಿಭೆಗಳಿಗಾಗಿ ಆಯೋಜಿಸಲಾಗುತ್ತಿರುವ ರಾಷ್ಟ್ರೀಯ ಮಟ್ಟದ ಹ್ಯಾಕಥಾನ್‌ಗಳು ಕೇವಲ ಸ್ಪರ್ಧೆ ಅಲ್ಲ, ಅವು ನವೀನ ಆಲೋಚನೆಗಳನ್ನು ಅನ್ವೇಷಿಸಲು ಮತ್ತು ವಾಸ್ತವ ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಮಹತ್ವದ ವೇದಿಕೆಗಳಾಗಿವೆ. ಈ 24 ಗಂಟೆಗಳ ಹ್ಯಾಕ ಥಾನ್ ಅನ್ನು ಕೇವಲ ಸ್ಪರ್ಧೆಯಾಗಿ ನೋಡಬೇಡಿ. ಇದು ನಿಮ್ಮ ಆಲೋಚನೆಗಳನ್ನು ಪರೀಕ್ಷಿಸುವ ಮತ್ತು ಹೊಸ ದಿಕ್ಕಿನಲ್ಲಿ ಚಿಂತಿಸುವ ಅವಕಾಶವಾಗಿದೆ ಎಂದರು.

ಹ್ಯಾಕಥಾನ್‌ಗಳು ಶೈಕ್ಷಣಿಕ ಮತ್ತು ಉದ್ಯಮಗಳ ನಡುವೆ ಇರುವ ಅಂತರವನ್ನು ಕಡಿಮೆ ಮಾಡುತ್ತವೆ. ಉದ್ಯಮಕ್ಕೆ ಬೇಕಾಗಿರುವ ನವೀನ ಪರಿಹಾರಗಳನ್ನು ನಿಮ್ಮಂತಹ ಯುವ ಮನಸ್ಸುಗಳಿಂದಲೇ ನಿರೀಕ್ಷಿಸಲಾಗುತ್ತಿದೆ. ಇತ್ತೀಚೆಗೆ ನಡೆದ ಒಂದು ಅಂತಾರಾಷ್ಟ್ರೀಯ ಹ್ಯಾಕಥಾನ್‌ನಲ್ಲಿ ಸುಮಾರು 1700 ವಿದ್ಯಾರ್ಥಿಗಳು ಭಾಗವಹಿಸಿ ವಿಶೇಷವಾಗಿ ಸೈಬರ್ ಭದ್ರತೆ ಮತ್ತು ಬ್ಲಾಕ್‌ಚೈನ್ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ತೋರಿದ ಆವಿಷ್ಕಾರಾತ್ಮಕ ಚಿಂತನೆಗಳ ಬಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಎಕ್ಸಲ್ ಸಾಫ್ಟ್‌ನ ಆದರ್ಶ್ ಸುಧೀಂದ್ರ, ವಿವಿ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಪ್ರಾಂಶುಪಾಲ ಡಾ.ಸಿ.ನಟರಾಜು, ಕುಲಪತಿ ಡಾ.ಎಸ್.ಎ.ಧನರಾಜ್ ಮತ್ತಿತರರು ಉಪಸ್ಥಿತರಿದ್ದರು.

# ನೀರಿನ ದರ ಏರಿಕೆ ವಾಪಾಸ್‌ಗೆ ಒತ್ತಾಯ

## ತೆರಿಗೆ ಸಂಗ್ರಹ ಮತ್ತು ಬಾಕಿ ಬಗ್ಗೆ ಶ್ವೇತಪತ್ರ ಹೊರಡಿಸಿ: ಮಾಜಿ ಮೇಯರ್ ಶಿವಕುಮಾರ್



ಮೈಸೂರು: ಕುಡಿಯುವ ನೀರಿನ ಶುಲ್ಕ ಹಾಗೂ ಒಳಚರಂಡಿ ಉಪಕರ ಹೆಚ್ಚಳ ಮಾಡಿರುವ ಮೈಸೂರು ಮಹಾನಗರ ಪಾಲಿಕೆ ನಗರದ ನೀರಿನ ಬೇಡಿಕೆ, ತೆರಿಗೆ ಸಂಗ್ರಹ ಮತ್ತು ಬಾಕಿ(ಡಿಸಿಬಿ) ಬಗ್ಗೆ ಶ್ವೇತಪತ್ರ ಹೊರಡಿಸಿ, ನೀರಿ ದರ ಏರಿಕೆ ನಿರ್ಧಾರ ವಾಪಾಸ್ ಪಡೆಯಲಿ ಎಂದು ಮಾಜಿ ಮೇಯರ್ ಶಿವಕುಮಾರ್ ಒತ್ತಾಯಿಸಿದರು.

ಈ ಸಂಬಂಧ ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಪಾಲಿಕೆ ಅಧಿಕಾರಿಗಳು ನಿಯತ್ತಾಗಿ ತೆರಿಗೆ ಕಟ್ಟುವ ಜನರಿಗೆ ಇನ್ನಷ್ಟು ತೆರಿಗೆ ಏರಿಸಿ ತೊಂದರೆ ಕೊಡುತ್ತಿದ್ದಾರೆ. ಆದರೆ ತೆರಿಗೆಯನ್ನೇ ಕಟ್ಟದೇ ಇರುವ ಗ್ರಾಹಕರಿಂದ ವಸೂಲಾತಿ ಮಾಡಲು ಯಾವ ಕ್ರಮ ಕೈಗೊಂಡಿದ್ದೀರಿ. ನಗರದ ಕೆಲವು ಭಾಗದ ಜನರು ಸರತಿ ಸಾಲುಗಳಲ್ಲಿ ನಿಂತು ಅಥವಾ ಆನ್‌ಲೈನ್ ಮೂಲಕ ಚಾಚೂತಪ್ಪದೆ ತೆರಿಗೆ ಕಟ್ಟುತ್ತಾರೆ. ಆದರೆ ನರಸಿಂಹರಾಜ ಕ್ಷೇತ್ರ ಭಾಗದ ಕೆಲವರು ನೀರಿನ ಮೀಟರ್‌ಗಳನ್ನೇ ಮಾರಿಕೊಂಡಿದ್ದಾರೆ. ನಲ್ಲಿಗೆ ಟ್ಯಾಪ್ ಕೂಡ ಹಾಕುವುದಿಲ್ಲ. ಆದ್ದರಿಂದ ಯಾವ ವರ?ಡ್‌ನಿಂದ ಎಷ್ಟು ತೆರಿಗೆ ಬರುತ್ತಿದೆ, ಎಷ್ಟು ಬಾಕಿ ಇದೆ, ವಸೂಲಾತಿಗೆ ಏನು ಕ್ರಮ ಕೈಗೊಂಡಿದ್ದೀರಿ ಎಂಬುದರ ವಾರ್ಡ್ ವಾರು ಡಿಸಿಬಿ ಶ್ವೇತಪತ್ರ ಹೊರಡಿಸಿ ಎಂದು ಆಗ್ರಹಿಸಿದರು.

ಪಾಲಿಕೆಯು ನೀರಿನ ಸಂಪರ್ಕ ಶುಲ್ಕವನ್ನು ಶೇ.30 ಮತ್ತು ಒಳಚರಂಡಿ ಶುಲ್ಕವನ್ನು ಶೇ.10ರಷ್ಟು ಏರಿಕೆ ಮಾಡಿದ್ದು, ಏ.1ರಿಂದಲೇ ಆದೇಶ ಜಾರಿಯಾಗಿದೆ. ಇಸ್ರೇಲ್–ಇರಾನ್ ಯುದ್ಧದಿಂದಾಗಿ ಜನರಿಗೆ ಎಲ್‌ಪಿಜಿ ಅಡುಗೆ ಅನಿಲ ಸಿಲಿಂಡರ್ ಸಿಗುತ್ತಿಲ್ಲ. ರಾಜ್ಯ ಸರ್ಕಾರ ಈಗಾಗಲೇ ವಿದ್ಯುತ್, ಹಾಲು ಮುಂತಾದ ಹಲವು ದರಗಳನ್ನು ಏರಿಸಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾನಗರ ಪಾಲಿಕೆ ನೀರಿನ ತೆರಿಗೆ ಮತ್ತು ಒಳಚರಂಡಿ ಸೆಸ್ ಹೆಚ್ಚಳ ಮಾಡಿರುವುದು ಸಾರ್ವಜನಿಕರಿಗೆ ಗಾಯದ ಮೇಲೆ ಬರೆ ಎಳೆದಂತೆ ಆಗಿದೆ. ಇದುವರೆಗೆ ನೀರಿನ ತೆರಿಗೆ ಜತೆಯಲ್ಲೇ ಒಳಚರಂಡಿ ಸೆಸ್ ಅನ್ನೂ ಸಂಗ್ರಹಿಸಲಾಗುತ್ತಿತ್ತು. ಈಗ ಒಳಚರಂಡಿಗೆ ಪ್ರತ್ಯೇಕವಾಗಿ ಶೇ.10ರಷ್ಟು ಉಪಕರ ವಿಧಿಸಲಾಗಿದೆ. ಒಳಚರಂಡಿ ಕಟ್ಟಿಕೊಂಡು ಗಬ್ಬೆದ್ದು ನಾರುತ್ತಿದ್ದರೂ 4–5 ದಿನ, ಕೆಲವೊಮ್ಮೆ ವಾರಗಟ್ಟಲೇ ಸರ?ವಜನಿಕರ ದೂರುಗಳಿಗೆ ಸ್ಪಂದಿಸುತ್ತಿಲ್ಲ. ರಸ್ತೆ ಮೇಲೆ ಯುಜಿಡಿ ನೀರು ಹರಿಯುತ್ತಿದ್ದರೂ ಜ ಟ್ಟಿ ಂ ಗ್ ಮಷಿನ್ ಕಳುಹಿಸಿ ಸ್ವಚ್ಛ ಮಾಡಿಸುತ್ತಿಲ್ಲ ಎಂದು ದೂರಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಸುಬ್ಬಯ್ಯ, ರಂಗಸ್ವಾಮಿ, ಸಾತ್ವಿಕ್, ರವೀಂದ್ರ ಇದ್ದರು.

### ಮರು ಪರಿಶೀಲನೆಗೆ ಆಗ್ರಹ

ಕುಡಿಯುವ ನೀರು ಮತ್ತು ಒಳಚರಂಡಿ ಶುಲ್ಕಗಳನ್ನು ಹೆಚ್ಚಳ ಮಾಡಿರುವ ತರ?ಮಾನವನ್ನು ಪಾಲಿಕೆ ಮರು ಪರಿಶೀಲನೆ ಮಾಡಬೇಕು. ಯಾರೋ ನಾಲ್ಕು ಜನ ಐಎಎಸ್, ಕೆಎಎಸ್ ಅಧಿಕಾರಿಗಳು ಕುಳಿತುಕೊಂಡು ಏಕಾಏಕಿ ತೀರ್ಮಾನ ಕೈಗೊಳ್ಳಬಾರದು. ನೀರಿನ ದರ ಏರಿಕೆ ಮಾಡಿರುವ ಬಗ್ಗೆ ಶಾಸಕರೇ ಮಾಹಿತಿ ನೀಡಿಲ್ಲ. ಆದ್ದರಿಂದ ನಗರದಲ್ಲಿರುವ ಪ್ರಮುಖರು, ಮಾಜಿ ಮೇಯರ್‌ಗಳು, ಸಂಘ–ಸಂಸ್ಥೆಗಳ ಮುಖ್ಯಸ್ಥರ ಸಭೆ ಕರೆದು ಚರ್ಚಿಸಿ ತೀರ್ಮಾನ ಕೈಗೊಳ್ಳ ಬೇಕೆಂದು ಒತ್ತಾಯಿಸಿದರು.


### ಅಧಿಕಾರಿಗಳಿಂದ ಗೊಂದಲ ಸೃಷ್ಟಿ

ಜನಪ್ರತಿನಿಧಿಗಳು ಇಲ್ಲದ ಸಂರ?ಭದಲ್ಲಿ ಆಡಳಿತಾಧಿಕಾರಿಗಳು 'ಪಾಲಿಸಿ ಮ್ಯಾಟರ್'ಗಳ ಬಗ್ಗೆಯೂ ತೀರ್ಮಾನ ಕೈಗೊಳ್ಳುತ್ತಿರುವುದು ಅಚ್ಚರಿ ಮೂಡಿಸಿದೆ. ಇತ್ತೀಚೆಗೆ ಪಾಲಿಕೆ ಅಧಿಕಾರಿಗಳು ಅರಮನೆ ಸಮೀಪದ ಫುಟ್‌ಪಾತ್‌ನಲ್ಲಿ ಟಾಂಗಾ ಕೇಂದ್ರ ನರ?ಮಿಸಲು ಅನುಮತಿ ನೀಡಿದ್ದರು. ಸರ?ವಜನಿರಿಂದ ವಿರೋಧ ವ್ಯಕ್ತವಾದ ಬಳಿಕ ವಾಪಸ್ ಪಡೆದರು. ದ್ವಿಚಕ್ರ ವಾಹನಕ್ಕೆ 100 ರೂ., ತ್ರಿಚಕ್ರ ವಾಹನಕ್ಕೆ 300 ರೂ. ಹಾಗೂ ಕಾರಿಗೆ 500 ರೂ. ತೆರಿಗೆ ವಿಧಿಸಿದ್ದರು. ಆ ಆದೇಶವನ್ನು ನಿನ್ನೆಯಷ್ಟೇ ವಾಪಸ್ ಪಡೆದುಕೊಂಡಿದ್ದಾರೆ. ಅಧಿಕಾರಿಗಳೇ ಸರ?ವಜನಿಕರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ ಎಂದು ಟೀಕಿಸಿದರು.

### ಸಮರ್ಪಕ ನೀರಿಲ್ಲ: ರಂಗಸ್ವಾಮಿ

ಮೈಸೂರು: ತಿಲಕ್ ನಗರ ಮತ್ತು ಕೈಲಾಸಪುರಂಗೆ ಸಮಪರ್ಕವಾಗಿ ನೀರು ಸರಬರಾಜು ಆಗುತ್ತಿಲ್ಲ ಎಂದು ಪಾಲಿಕೆ ಮಾಜಿ ಸದಸ್ಯ ರಂಗಸ್ವಾಮಿ ಆರೋಪಿಸಿದರು. ತಿಲಕ್ ನಗರಕ್ಕೆ ನೀರು ಬಂದರೆ ಕೈಲಾಸಪುರಂಗೆ ಇರುವುದಿಲ್ಲ, ಕೈಲಾಸಪುರಂಗೆ ಬಂದರೆ ತಿಲಕ್‌ನಗರಕ್ಕೆ ಇರುವುದಿಲ್ಲ. ಸಮಸ್ಯೆ ಬಗೆಹರಿಸಲು ಹಿಂದೆ ವಾಣಿವಿಲಾಸ ಕೇಂದ್ರದಿಂದ ತಿಲಕ್‌ನಗರವರೆಗೆ ಪೈಪ್‌ಲೈನ್, ಸ್ಥಳೀಯವಾಗಿ ಸಂಪು ನರ?ಮಿಸಲಾಗಿತ್ತು. ಈಗಲೂ ಜನ ನೀರಿಗೆ ಪರದಾಡುತ್ತಿದ್ದಾರೆ. ಒಳಚರಂಡಿ ದೂರುಗಳಿಗೂ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದರು.

# ತಂಬಾಕಿಗೆ ಪರ್ಯಾಯವಾಗಿ ರೇಷ್ಮೆ ಬೆಳೆಯಿರಿ



ಪಿರಿಯಾಪಟ್ಟಣ: ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ತಾಲೂಕಿನ ವಿವಿಧ ಇಲಾಖೆ ಕೆಡಿಪಿ ಸಭೆ ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಂಬಾಕಿಗೆ ಸೂಕ್ತ ದರ ದೊರಕದೆ ತಂಬಾಕು ಬೆಳೆಗಾರರು ಹತಾಶರಾಗಿದ್ದು ರೇಷ್ಮೆ ಬೆಳೆ ಮತ್ತು ಮಾರುಕಟ್ಟೆ ವ್ಯವಸ್ಥೆ ಬಗ್ಗೆ ರೈತರಿಗೆ ಸೂಕ್ತ ತಿಳುವಳಿಕೆ ನೀಡಿದಲ್ಲಿ ತಂಬಾಕು ಬೆಳೆಗಾರರು ರೇಷ್ಮೆ ಬೆಳೆಯತ್ತ ಮುಖ ಮಾಡಲಿದ್ದಾರೆ ಎಂದರು. 2023–24 ರಲ್ಲಿ ಬೈ ವೋಲ್ಟೀನ್ ಸಿಎಸ್‌ಆರ್ ರೇಷ್ಮೆ ಹೈಬ್ರಿಡ್ ತಳಿಗೆ ಪ್ರತಿ ಕೆಜಿಗೆ ರೂ.330 ರಿಂದ 350 ದೊರಕುತ್ತಿತ್ತು ಈಗ ಪ್ರತಿ ಕೆಜಿ ಗೆ ರೂ.850 ರಿಂದ 900 ರ ವರೆಗೂ ದೊರಕುತ್ತಿದ್ದು ಉತ್ತಮ ಲಾಭದಾಯಕವಾದ ಕೃಷಿಯಾಗಿದ್ದು ತಂಬಾಕಿಗೆ ಪರ್ಯಾಯ ವಾಣಿಜ್ಯ ಬೆಳೆಯಾಗಿ ರೇಷ್ಮೆ ಬೆಳೆಯನ್ನು ಬೆಳೆಯುವತ್ತ ರೈತರು ಮುಂದಾಗಲು ರೇಷ್ಮೆ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಪಟ್ಟಣದ ಬಾರ್ ನಿಂದ ಹಳ್ಳಿಗಳಿಗೆ ಅಕ್ರಮ ಮಧ್ಯ ಸರಬರಾಜು ಮಾಡುವವರ ವಿರುದ್ಧ ಕೇವಲ ಕೇಸ್ ದಾಖಲಿಸದೆ ಬಂದ್ ಮಾಡಿಸಲು ಕ್ರಮ ಕೈಗೊಳ್ಳಿ ಎಂದು ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ರಮ ಮಧ್ಯ ಮಾರಾಟ ಬಗ್ಗೆ ಹೆಚ್ಚು ದೂರು ಕೇಳಿ ಬರುತ್ತಿವೆ ಇಲಾಖೆ ನಿಯಮ ಮಿರುವ ಬಾರ್ ಮಾಲೀಕರ ವಿರುದ್ಧ ಕೇಸ್ ದಾಖಲಿಸಿದರೆ ದಂಡ ಪಾವತಿಸಿ ಮತ್ತೆ ಅದೇ ಕೆಲಸ ಮಾಡುತ್ತಾರೆ ಪದೇ ಪದೇ ನಿಯಮ ಉಲ್ಲಂಘಿಸುವ ಸಿಎಲ್ 7 ಬಾರ್‌ಗಳನ್ನು ಬಂದ್ ಮಾಡಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಅಬಕಾರಿ ನಿರೀಕ್ಷಕರಾದ ವೆಂಕಟೇಶ್ ಅವರಿಗೆ ಸೂಚಿಸಿದರು.

ತಾಲೂಕಿನ ಪ್ರತಿಯೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರಸಗೊಬ್ಬರ ದಾಸ್ತಾನು ಇರುವಂತೆ ವ್ಯವಸ್ಥೆ ಮಾಡಬೇಕು, ಖಾಸಗಿ ಅಂಗಡಿಗಳಲ್ಲಿ ರಸಗೊಬ್ಬರಕ್ಕೆ ರೈತರು ದುಬಾರಿ ಬೆಲೆ ನೀಡಬೇಕಾಗುತ್ತದೆ, ಸಹಕಾರ ಸಂಘಗಳಲ್ಲಿ ರಸಗೊಬ್ಬರ ದಾಸ್ತಾನು ಇದ್ದಲ್ಲಿ ರೈತರಿಗೆ ನ್ಯಾಯಯುತ ದರದಲ್ಲಿ ರಸಗೊಬ್ಬರ ದೊರಕಲಿದೆ, ಗ್ರಾಮ ಪಂಚಾಯತಿ ಮತ್ತು ಹೋಬಳಿ ಮಟ್ಟದಲ್ಲಿ ರೈತರ ಸಭೆ ನಡೆಸಿ ಸಿರಿ ಧಾನ್ಯಗಳ ಕೃಷಿ ಬಗ್ಗೆ ಮಾಹಿತಿ ನೀಡುವಂತೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಕುಸುಮ ಅವರಿಗೆ ಸೂಚನೆ ನೀಡಿದರು.

ತೋಟಗಾರಿಕಾ ಇಲಾಖೆ ಫಲಾನುಭವಿಗಳ ಬಗ್ಗೆ ಸಮರ್ಪಕ ಮಾಹಿತಿ ನೀಡುವಲ್ಲಿ ವಿಫಲರಾದ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಗುರುಸ್ವಾಮಿ ಮತ್ತು ತೋಟಗಾರಿಕೆ ಅಧಿಕಾರಿ ಪ್ರಸಾದ್‌ರ ವಿರುದ್ಧ ಗರಂ ಆದ ಸಚಿವರು ಕೆಡಿಪಿ ಸಭೆಗೆ ಬರುವಾಗ ಸೂಕ್ತ ಮಾಹಿತಿಗಳನ್ನು ತರಬೇಕು ಎನ್ನುವ ಪರಿಜ್ಞಾನ ನಿಮಗಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡು ಕೂಡಲೇ ಕಚೇರಿಗೆ ಹೋಗಿ ಮಾಹಿತಿ ತೆಗೆದುಕೊಂಡು ಬಂದು ನನ್ನ ಅನುಮತಿ ಪಡೆದು ಸಭೆಯೊಳಗೆ ಬನ್ನಿ ಎಂದು ಅಲ್ಲಿಂದ ಹೊರ ಕಳಿಸಿದರು. ಸಮಾಜ ಕಲ್ಯಾಣ, ಬಿಸಿಎಂ, ಅರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಲೋಕೋಪಯೋಗಿ, ಅರಣ್ಯ, ಸಾರಿಗೆ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದು ಪ್ರಗತಿ ಪರಿಶೀಲನೆ ನಡೆಸಿದರು. ಅರಣ್ಯ ಇಲಾಖೆ ಡಿಸಿಎಫ್ ಕಿರುತಂಬನ್, ತಾ.ಪಂ ಇಒ ಡಿ.ಬಿ ಸುನಿಲ್ ಕುಮಾರ್, ತಹಶೀಲ್ದಾರ್ ನಿಸರ್ಗ ಪ್ರಿಯ, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ನಿತಿನ್ ವೆಂಕಟೇಶ್, ಕೆಡಿಪಿ ಸಮಿತಿ ಸದಸ್ಯರಾದ ಆಯತನಹಳ್ಳಿ ಮಹದೇವ್, ಉಪಸ್ಥಿತರಿದ್ದರು

### ಅಬಕಾರಿ ಇಲಾಖೆಗೆ ಮುತ್ತಿಗೆ ಹಾಕಿ ಆಕ್ರೋಶ

# ಅಕ್ರಮ ಮದ್ಯ ಮಾರಾಟ ನಿಷೇಧಿಸುವಂತೆ ಗ್ರಾಮಸ್ಥರ ಪ್ರತಿಭಟನೆ



ಕೆ ಆರ್ ಪೇಟೆ: ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಮೂಡನಹಳ್ಳಿ ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸುವಂತೆ ಒತ್ತಾಯಿಸಿ ಮಹಿಳೆಯರು ಕೆ.ಆರ್.ಪೇಟೆ ತಾಲ್ಲೂಕು ಕೇಂದ್ರದಲ್ಲಿರುವ ಅಬಕಾರಿ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮದ ನೂರಾರು ಮಹಿಳೆಯರು ಹಾಗೂ ಯುವಕರು ಪ್ರತಿಭಟನೆ ನಡೆಸಿ, ನಮ್ಮ ಮೂಡನಹಳ್ಳಿ ಗ್ರಾಮದ ಬೀದಿ ಬೀದಿಗಳಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿರುವ ಮಧ್ಯ ಮಾರಾಟವನ್ನು ಇಂದಿನಿಂದಲೇ ಬಂದ್ ಮಾಡುವ ಆದೇಶ ಹೊರಡಿಸುವವರೆವಿಗೂ ಇಲ್ಲಿಂದ ಹೋಗುವುದಿಲ್ಲ ಎಂದು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದರು. ಮೂಡನಹಳ್ಳಿ ಗ್ರಾಮದಿಂದ ಪ್ರಮುಖ ರಸ್ತೆ ಮೂಲಕ ಕೆ ಆರ್ ಪೇಟೆ ಪಟ್ಟಣದ ಶಾಸಕರಾದ ಹೆಚ್ ಟಿ ಮಂಜು ಅವರ ಮನೆಯವರೆಗೆ ಪಾದಯಾತ್ರೆ ಮೂಲಕ ಆಗಮಿಸಿ ಶಾಸಕರಿಗೆ ಮನವಿ ಸಲ್ಲಿಸಿ ನಂತರ ಅಬಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಗ್ರಾಮಸ್ಥರ ಮನವಿ ಆಲಿಸಿದ ಶಾಸಕ ಹೆಚ್ ಟಿ ಮಂಜು ಅವರು ಅಬಕಾರಿ ಡಿಸಿ ಅವರಿಗೆ ವಿಡಿಯೋ ಕರೆ ಮಾಡಿ ಮಾತನಾಡಿ ತಕ್ಷಣವೇ ಮೂಡನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮಧ್ಯ ಮಾರಾಟವನ್ನು ಬಂದ್ ಮಾಡಿಸಬೇಕು. ಜನರ ಭಾವನೆಗೆ ಬೆಲೆ ಕೊಟ್ಟು ಮಧ್ಯ ಮಾರಾಟವನ್ನು ನಿಲ್ಲಿಸಿ ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಕಟ್ಟು ನಿಟ್ಟಿನ ಕ್ರಮ ವಹಿಸುವಂತೆ ಖಡಕ್ ಸೂಚನೆ ನೀಡಿದರು.

ಗ್ರಾಮದ ಮುಖಂಡರು ಮಾತನಾಡಿ ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸದಿದ್ದರೆ ಉಗ್ರ ಹೋರಾಟವನ್ನು ಮಾಡಲು ಹಿಂಜರಿಯುವುದಿಲ್ಲ ಎಂದು ಗ್ರಾಮಸ್ಥರು ಖಡಕ್ಕಾಗಿ ತಿಳಿಸಿದ್ದಾರೆ. ಕುಡಿತದ ಚಟದಿಂದ ಯುವಕರು, ಮನೆಯ ಯಜಮಾನರು ಸಹ ಹಾಳಾಗುತ್ತಿದ್ದಾರೆ.ಮಕ್ಕಳ ಮೇಲೆ ಪರಿಣಾಮ ಕೆಟ್ಟ ಬೀರುತ್ತಿದೆ. ಅಕ್ರಮ ಮದ್ಯ ಮಾರಾಟದಿಂದಾಗಿ ಮೂಡನಹಳ್ಳಿ ಗ್ರಾಮದಲ್ಲಿ ಅಶಾಂತಿ ಸೃಷ್ಟಿಯಾಗಿದೆ. ಗ್ರಾಮದ ನೆಮ್ಮದಿ ಹಾಳಾಗಿದೆ ಎಂದು ಪ್ರತಿಭಟನಾ ನಿರತ ಮಹಿಳೆಯರು ಹಾಗೂ ಗ್ರಾಮಸ್ಥರು ಗಂಭೀರ ಆರೋಪ ಮಾಡಿದರು. ಸ್ಥಳಕ್ಕೆ ಭೇಟಿ ನೀಡಿದ ಮಂಡ್ಯ ಜಿಲ್ಲಾ ಅಬಕಾರಿ ಡಿವೈ.ಎಸ್.ಪಿ. ರಾಧಾಮಣಿ ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಮೂಡನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮಧ್ಯ ಮಾರಾಟವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಅಲ್ಲದೆ ಪ್ರತಿನಿತ್ಯ ಅಬಕಾರಿ ಅಧಿಕಾರಿಗಳು ಹಾಗೂ ಪೊಲೀಸರ ಬೀಟ್ ವ್ಯವಸ್ಥೆ ಕಲ್ಪಿಸಿ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣ ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿರುವ ಸ್ಥಳಕ್ಕೆ ಭೇಟಿ ನೀಡಿದ ಶಾಸಕರಾದ ಎಚ್.ಟಿ. ಮಂಜು ಅವರು ಮೂಡನಹಳ್ಳಿ ಗ್ರಾಮ ಸೇರಿದಂತೆ ತಾಲೂಕಿನಾದ್ಯಂತ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಶಾಂತಿಯನ್ನು ಸುವ್ಯವಸ್ಥೆ ಕಾಪಾಡಬೇಕೆಂದು ಶಾಸಕರು ಖಡಕ್ ಸೂಚನೆ ನೀಡಿದರು.ಕೆ ಆರ್ ಪೇಟೆ ಪಟ್ಟಣದ ನಿಲ್ದಾಣದ ಬಳಿ ಬೆಳಿಗ್ಗೆ 5ಗಂಟೆಗೆ ಅಕ್ರಮವಾಗಿ ಮಧ್ಯ ಮಾರಾಟವನ್ನು ಮಾಡುತ್ತಿರುವ ಬಗ್ಗೆ ಅಬಕಾರಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಬೆಳ್ಳಂಬೆಳಗ್ಗೆ ಮಧ್ಯ ಮಾರಾಟ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು. ಹಾಗೂ ಪಟ್ಟಣದಲ್ಲಿ ಇನ್ನೂ ಕೆಲವು ಕಡೆ ಬೆಳ್ಳಂ ಬೆಳಿಗ್ಗೆ ಅಕ್ರಮ ಮಧ್ಯ ಮಾರಾಟ ತಡೆಗೆ ಅಬಕಾರಿ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ತಾಲೂಕಿನಾದ್ಯಂತ ನಡೆಯುತ್ತಿರುವ ಅಕ್ರಮ ಮಧ್ಯ ಮಾರಾಟವನ್ನು ತಡೆಗಟ್ಟಬೇಕೆಂದು ಶಾಸಕರಾದ ಮಂಜು ಅವರು ಖಡಕ್ ಸೂಚನೆ ನೀಡಿದರು.

# ಭವ್ಯ ಪಟ್ಟಾಭಿಷೇಕ ಮಹೋತ್ಸವ



ಚಾಮರಾಜನಗರ, ನಗರದ ಶಂಕರಪುರ ಬಡಾವಣೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಶ್ರೀರಾಮರ ಪಟ್ಟಾಭಿಷೇಕ ಮಹೋತ್ಸವವು ಭಕ್ತಿ ಭಾವದಿಂದ ಹಾಗೂ ಅದ್ದೂರಿಯಾಗಿ ನೆರವೇರಿತು.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಶ್ರೀರಾಮರ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ, ಹಾಲಿನ ಅಭಿಷೇಕ ಸೇರಿದಂತೆ ವಿವಿಧ ವಿಧಿ ವಿಧಾನಗಳು ನೆರವೇರಿಸಲಾಯಿತು. ದೇವಾಲಯವನ್ನು ವಿಶೇಷವಾಗಿ ಪುಷ್ಪಗಳಿಂದ ಅಲಂಕರಿಸಲಾಗಿದ್ದು, ಭಕ್ತರ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ವಿಪ್ರ ಮಹಿಳೆಯರು ಲಕ್ಷ್ಮೀ ಸಹಸ್ರನಾಮ ಹಾಗೂ ವಿಷ್ಣು ಸಹಸ್ರನಾಮ ಪಾರಾಯಣಗಳನ್ನು ಭಕ್ತಿಭಾವದಿಂದ ನೆರವೇರಿಸಿದರು. ಬಳಿಕ ಕುಂಕುಮ ಅರ್ಚನೆ ಹಾಗೂ ಮಹಾಮಂಗಳಾರತಿ ಕಾರ್ಯಕ್ರಮಗಳು ನಡೆದವು. ಶ್ರೀರಾಮರ ಪಟ್ಟಾಭಿಷೇಕ ಕಾರ್ಯಕ್ರಮವು ವೈಭವದಿಂದ ಜರುಗಿದ ಪರಿಣಾಮ, ಭಕ್ತರಲ್ಲಿ ಧಾರ್ಮಿಕ ಉತ್ಸಾಹ ಮೂಡಿತು. ಕಾರ್ಯಕ್ರಮದ ನಂತರ ಭಕ್ತಾದಿಗಳು, ಸ್ಥಳೀಯರು ಹಾಗೂ ಸಾರ್ವಜನಿಕರಿಗೆ ಪ್ರಸಾದ ವಿತರಣೆ ಮತ್ತು ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು, ಸ್ಥಳೀಯ ನಿವಾಸಿಗಳು ಹಾಗೂ ವಿಪ್ರ ಬಾಂಧವರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

# ಜಿಲ್ಲಾ ಘಟಕ ನೂತನ ಅಧ್ಯಕ್ಷ, ಪದಾಧಿಕಾರಿಗಳ ನೇಮಕ



ಚಾಮರಾಜನಗರ, ರಾಜ್ಯದಲ್ಲಿ ನೊಂದವರ ಧ್ವನಿಯಾಗಿ ಕರ್ನಾಟಕ ರಾಜ್ಯ ಭೀಮ್ ಸೇನೆ ಕೆಲಸ ಮಾಡುತ್ತದೆ ಎಂದು ಸೇನೆಯ ರಾಜ್ಯಾಧ್ಯಕ್ಷ ಸರ್ವೇಶ್ ಹೇಳಿದರು.

ನಗರದ ಪ್ರವಾಸಿಮಂದಿರದಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆ ವತಿಯಿಂದ ನಡೆದ ಸಭೆಯಲ್ಲಿ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿ ಅವರಿಗೆ ಸಂಘಟನೆಯ ಶಲ್ಯಹಾಕಿ ಸನ್ಮಾನಿಸಿ ಮಾತನಾಡಿದರು. ಎಸ್ಸಿ, ಎಸ್ಟಿ ಸಮುದಾಯ ಅಲ್ಲದೇ ಇತರ ಸಮುದಾಯಗಳಲ್ಲಿ ನೊಂದವರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳನ್ನು ತಲುಪಿಸುವುದು ಸೇನೆಯ ಉದ್ದೇಶವಾಗಿದೆ. ರಾಜ್ಯಾದ್ಯಂತ ಬಗರ್ ಹುಕುಂ ಸಾಗುವಳಿ ತೊಂದರೆ ಅನುಭವಿಸುತ್ತಿದ್ದಾರೆ. ದೌರ್ಜನ್ಯಕ್ಕೊಳದವರಿಗೆ ನ್ಯಾಯ ಕೊಡಿಸುವುದು ಸಂಘಟನೆ ಉದ್ದೇಶವಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಕಾಡಂಚಿನ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳ ಒದಗಿಸಲು ಹೋರಾಟ ಮಾಡಲಾಗುತ್ತದೆ ಆಗಾಗಿ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು ಸಂಘಟನೆ ಮಾಡಿ ಭೀಮ್ ಸೇನೆ ಸದೃಡಗೊಳಿಸುವಂತೆ ಸಲಹೆ ನೀಡಿದರು.

**▸▸ ಕರ್ನಾಟಕ ರಾಜ್ಯ ಭೀಮ್ ಸೇನೆ ಪದಾಧಿಕಾರಿಗಳ ಆಯ್ಕೆ**

ಈಗಾಗಲೇ ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಜಿಲ್ಲಾ ಘಟಕ ಸ್ಥಾಪನೆಯಾಗಿದ್ದು, ರಾಜ್ಯದ 31 ಜಿಲ್ಲೆಗಳಲ್ಲೂ ಸಂಘಟನೆ ವಿಸ್ತರಣೆ ಮಾಡಿ ನೊಂದವರ ಧ್ವನಿಯಾಗಿ ಕೆಲಸ ಮಾಡಲಾಗುತ್ತದೆ ಎಂದರು.

ಸಭೆಯಲ್ಲಿ ಮೈಸೂರು ಜಿಲ್ಲಾಧ್ಯಕ್ಷ ರಾಜಣ್ಣ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಮಹೇಶ್, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಶೇಖರ್, ಚಾಮರಾಜನಗರ ಜಿಲ್ಲಾಧ್ಯಕ್ಷ ಎಸ್. ಮಾದಯ್ಯ ತಮ್ಮಡಹಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ರಘು, ತಾಲೂಕು ಅಧ್ಯಕ್ಷ ಗುರುಸ್ವಾಮಿ ಕೆರೆಹಳ್ಳಿ, ಉಪಾಧ್ಯಕ್ಷ ಗಿರೀಶ್,ಜಿಲ್ಲಾ ಮಹಿಳಾ ಗೌರವಾಧ್ಯಕ್ಷೆ ಕಮಲ, ಜಿಲ್ಲಾಧ್ಯಕ್ಷೆ ಅಣ್ಣಪೂರ್ಣ ಎಂ. ಪ್ರಧಾನ ಕಾರ್ಯದರ್ಶಿ ಡಿ. ದೊಡ್ಡತಾಯಮ್ಮ, ಯುವ ಘಟಕ ಅಧ್ಯಕ್ಷೆ ಜ್ಯೋತಿ, ತಾಲೂಕು ಗೌರವಾಧ್ಯಕ್ಷ ಶಿವಕುಮಾರ್ ಚಾಟೀಪುರ, ಸಂತೇಮರಹಳ್ಳಿ ಹೋಬಳಿಯ ಅಧ್ಯಕ್ಷ ಎಂ.ಮಾದೇಶ್, ಉಪಾಧ್ಯಕ್ಷ ರವಿಕುಮಾರ್ ಮಸಣಾಪುರ,ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಎನ್.ಚಾಟೀಪುರ, ಯುವ ಘಟಕದ ಅಧ್ಯಕ್ಷ ಜಿ.ಗುರು, ಕಸಬಾ ಹೋಬಳಿಯ ನಿರ್ದೇಶಕ ಶಶಿಕುಮಾರ್ ಇತರರು ಭಾಗವಹಿಸಿದ್ದರು.

# ಪ್ರಚಾರಕ್ಕೆ ಸೇವೆ ಸಲ್ಲದು: ಮಲ್ಲೇಶ್ ಗುರೂಜಿ

## ಸಂಸ್ಕೃತಿ ಸೌರಭ ಟ್ರಸ್ಟ ವತಿಯಿಂದ ಸಂಸ್ಕೃತಿ ಉತ್ಸವ, ಸಂಸ್ಕೃತಿ ಪುರಸ್ಕಾರ ಯಶಸ್ವಿ

ರಾಮನಗರ: ಸಾಧನೆ, ಸೇವೆಗಳು ಸುದ್ದಿಯಾಗಬೇಕು, ಪ್ರಚಾರಕ್ಕಾಗಿ ಸೇವೆ ಮಾಡುವುದು ಸರಿಯಲ್ಲ ಎಂದು ಗೌಡಗೆರೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿ ಡಾ.ಜಿ.ಬಿ.ಮಲ್ಲೇಶ್ ಗುರೂಜಿ ಹೇಳಿದರು.

ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ನಿಕಾಮಹಲ್‌ನಲ್ಲಿ ಸಂಸ್ಕೃತಿ ಸೌರಭ ಟ್ರಸ್ಟ್ ಹಮ್ಮಿಕೊಂಡಿದ್ದ ಸಂಸ್ಕೃತಿ ಉತ್ಸವ ಹಾಗು ಸಂಸ್ಕೃತಿ ಪುರಸ್ಕಾರ ಸಮಾರಂಭದ ಸಾನಿಧ್ಯವಹಿಸಿ ಅವರು ಮಾತನಾಡಿದರು. ಸಿದ್ದಗಂಗಾ ಶ್ರೀಗಳಾಗಿದ್ದ ನಡೆದಾಡುವ ದೇವರು ಖ್ಯಾತಿಯ ಶಿವಕುಮಾರ ಸ್ವಾಮಿ ಅವರು ನಮಗೆಲ್ಲ ಅದರ್ಶಪ್ರಾಯರು. ಅವರೆಂದು ಪ್ರಚಾರಕ್ಕಾಗಿ ಸೇವೆ ಮಾಡಿದವರಲ್ಲ ಎಂದರು.

ಸರ್ಕಾರವನ್ನು ಕೇಳಿ ಸನ್ಮಾನ ಪಡೆಯುವಂತ ಹದ್ದಲ್ಲ ಎಂದ ಅವರು ಸಂಸ್ಕೃತಿ ಸೌರಭ ಟ್ರಸ್ಟ್‌ನ ಅಧ್ಯಕ್ಷ ರಾ.ಬಿ.ನಾಗರಾಜ್ ಸಹ ಪ್ರಚಾರಕ್ಕಾಗಿ ಸುದ್ದಿ ಮಾಡುತ್ತಿಲ್ಲ. ಅವರ ನಿರಂತರ ಕಲಾ ಸೇವೆ ಶ್ಲಾಘನೀಯ ಎಂದರು. ಇಂದಿನ ದಿನಗಳಲ್ಲಿ ಮಾನವನು ಹಣದ ವ್ಯಾಮೋಹಕ್ಕೆ ಸಿಲುಕಿ ಮಾನಸಿಕ ನೆಮ್ಮದಿ ಕಳೆದುಕೊಳ್ಳುತ್ತಿದ್ದಾನೆ. ಎಷ್ಟೇ ಹಣ , ಆಸ್ಥಿ, ಇದ್ದರೂ ಸತ್ತಾಗ ಉಳಿಯುವುದು, ನಾವು ಮಾಡಿದ ಒಳ್ಳೆಯ ಕಾರ್ಯಗಳು. ಪಾಪ ಪುಣ್ಯಗಳೆರಡೇ ನಮ್ಮ ಹಿಂದೆ ಬರೋದು. ಹಾಗಾಗಿ ಇದ್ದಷ್ಟು ದಿನ ಪುಣ್ಯ ಸಂಪಾದಿಸೋಣ ಎಂದು ಅವರು ಕರೆ ನೀಡಿದರು.

ಬೆಂ.ದಕ್ಷಿಣ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ಕೆ.ಸತೀಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕೀರ್ತನಕಾರ ಶಿವಾರ ಉಮೇಶ್, ಆದ್ಯಾತ್ಮಿಕ ಚಿಂತಕ ಪರಶುರಾಮರ ಮಠದ ಎಂ.ರಾಮಚಂದ್ರಪ್ಪ , ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಶಿಲ್ಪಶ್ರೀ ಪ್ರಶಸ್ತಿ ಪುರಸ್ಕೃತ ಶಿಲ್ಪಿ ಎಂ.ಶರಣ್ ರವರಿಗೆ ಸಂಸ್ಕೃತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ವಕೀಲ ಹೆಚ್.ಜಯರಾಂ, ಜಿಲ್ಲಾ ಪತ್ರ ಬರಹಗಾರ ಸಂಘದ ಪ್ರದಾನ ಕಾರ್ಯದರ್ಶಿ ಹೆಚ್.ಎನ್.ರಮೇಶ್, ಜೀವ ವಿಮಾ ನಿಗಮದ ನಿವೃತ್ತ ಆಡಳಿತಾಧಿಕಾರಿ ಮೋಹನಕಾಂತ ರಂಗದಳ, ಕ್ಯಾಸಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಶ್ರೀಧರ್, ಮಾಜಿ ನಗರಸಭಾ ಸದಸ್ಯ ಶಿವಶಂಕರ್, ವಕೀಲ ಎಸ್.ನಾಗರಾಜು, ಡಿ. ದೇವರಾಜ ಅರಸು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ಹೆಚ್.ಸುರೇಶ್, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಕೂನಮುದ್ದನ ಹಳ್ಳಿ ರುದ್ರೇಶ್, ನಮ್ಮ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಡಿ.ಎಂ. ಮಾದೇಗೌಡ, ಶ್ರೀ ವಾಸವಿ ವಿದ್ಯಾನಿಕೇತನ ಟ್ರಸ್ಟ್ ಕಾರ್ಯದರ್ಶಿ ಕೆ.ಆರ್.ನಾಗೇಶ್, ಭಾರತ್ ವಿಕಾಸ್ ಪರಿಷತ್ತಿನ ಮಾಜಿ ಅಧ್ಯಕ್ಷ ರಾ.ಸಿ.ಬಸವರಾಜು, ರಾಮನಗರ ಜಿಲ್ಲಾ ಕಸಾಪ ಮಾಜಿ ಕಾರ್ಯದರ್ಶಿ ಕಾ.ಪ್ರಕಾಶ್, ರಂಗಭೂಮಿ ಕಲಾವಿದ ಶ್ಯಾನುಬೋಗನಹಳ್ಳಿ ಎಸ್ ರುದ್ರೇಶ್ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಗಾಯಕ ಎಸ್.ರಘುನಾಥ್, ಮಂಡ್ಯ ರಾಘವೇಂದ್ರ, ಕೆಂಗಲ್ ವಿನಯ್ ಕುಮಾರ್, ವಿ.ಲಿಂಗರಾಜು, ಗೋಪಾಲ್ ಬೊಮ್ಮಚ್ಚನಹಳ್ಳಿ, ಶ್ರೀಮತಿ ಸೌಜನ್ಯ, ಹಾಗೂ ನೂಪುರ ಸಂಗೀತದ ಸಂಜಿತ್ , ಧನ್ಯಂತ್ , ಧೀಕ್ಷಿತ್ ಗೀತಗಾಯನ ನಡೆಸಿಕೊಟ್ಟರು. ಸಂಗೀತ ಶಿಕ್ಷಕ ಎ.ಡಿ.ವಿಜ ಯೇಂದ್ರ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು. ಸಂಸ್ಕೃತಿ ಸೌರಭ ಟ್ರಸ್ಟ್ ಕಾರ್ಯದರ್ಶಿ ಹೆಚ್.ಬಿ.ಸಿದ್ಧರಾಜು ವಂದಿಸಿದರು.




### ನಮ್ಮದು ಸಾಂಕೇತಿಕ ಕಾರ್ಯಕ್ರಮಗಳಲ್ಲ

**ರಾ.ಬಿ.ನಾಗರಾಜ್**

ಸಂಸ್ಕೃತಿ ಸೌರಭ ಟ್ರಸ್ಟ್ ಅಧ್ಯಕ್ಷ ಡಾ. ರಾ.ಬಿ.ನಾಗರಾಜ್ ಮಾತನಾಡಿ, ಸರ್ಕಾರದ ಅಕಾಡೆಮಿ, ಇಲಾಖೆಗಳಿಗಾಗಿ ನಾವೆಂದೂ ಸಾಂಕೇತಿಕ ಕಾರ್ಯಕ್ರಮ ಮಾಡುತ್ತಿಲ್ಲ. ಸಾಮಾಜಿಕ ಕಳಕಳಿ ಬದ್ಧತೆಯಿಂದ ನಾಡಿನ ನೂರಾರು ಮಹನೀಯರನ್ನು ಗೌರವಿಸಿದ, ನೂರಾರು ಕಲಾವಿದರಿಗೆ ವೇದಿಕೆ ಸೃಷ್ಟಿಸಿದ ಹೆಮ್ಮೆ ನಮ್ಮದು ಎಂದರು.

### ನಿಸ್ವಾರ್ಥ ಸಂಘಟಕರಿಗೆ ನಿರೀಕ್ಷಿತ ಗೌರವ ಸಿಗುತ್ತಿಲ್ಲ

**ಆರ್.ಕೆ.ಬೈರಲಿಂಗಯ್ಯ**


ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಆರ್. ಕೆ.ಬೈರಲಿಂಗಯ್ಯ ಮಾತನಾಡಿ, ಯಾರು ಪ್ರೋತ್ಸಾಹ ನೀಡಲಿ ಬಿಡಲಿ, ನಿರಂತರವಾಗಿ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿರುವ ರಾ.ಬಿ.ನಾಗರಾಜ್ ರವರ ಸಾಮಾಜಿಕ ಕಳಕಳಿ ಮೆಚ್ಚುವಂತದ್ದು. ಆದರೆ, ಇಂತಹ ಒಬ್ಬ ನಿಸ್ವಾರ್ಥ ಕಲಾವಿದ, ಸಂಘಟಕರನ್ನ ಈ ಸರ್ಕಾರಗಳು, ಸಮಾಜ ಗೌರವಿಸಿ ಗುರುತಿಸುವಲ್ಲಿ ವಿಫಲವಾಗಿವೆ ಎಂದು ಬೇಸರ ವ್ಯಕ್ತ ಪಡಿಸಿದರು.

### ಚಿಕ್ಕ ಪ್ರಯತ್ನ ನನ್ನದು

ಸಂಸ್ಕೃತಿ ಪುರಸ್ಕಾರ ಸ್ವೀಕರಿಸಿದ ಕೀರ್ತನಕಾರ ಶಿವಾರ ಉಮೇಶ್ ಮಾತನಾಡಿ, ನಾನು ಪ್ರತಿದಿನ ಸಾವಿರಾರು ಜನರ ಸಮ್ಮುಖದಲ್ಲಿ ಕಾರ್ಯಕ್ರಮ ಕೊಡುತ್ತಿರುತ್ತೇನೆ. ಆದರೆ, ಇಂದು ಪೂಜ್ಯ ಗುರುಗಳ ಸಾನಿಧ್ಯದಲ್ಲಿ , ಕಲ್ಪನೆಗೂ ಮೀರಿದ ವ್ಯಕ್ತಿತ್ವದ ರಾಮಚಂದ್ರಪ್ಪನವರು ಹಾಗೂ ಶಿಲ್ಪಿಗಳಾದ ಶರಣ್‌ರಾವತ್ ಜೊತೆಗೆ ನನಗೆ ಪ್ರಶಸ್ತಿ ನೀಡಿ ಗೌರವಿಸಿದ್ದು ಮನಸ್ಸಿಗೆ ತುಂಬಾ ಸಂತೋಷವನ್ನು ಉಂಟು ಮಾಡಿದೆ. ನನ್ನ ಗುರುಗಳಾದ ಭದ್ರಗಿರಿ ಅಚ್ಚುತದಾಸರ ಆಶೀರ್ವಾದದಿಂದ, ನಮ್ಮ ಗ್ರಾಮೀಣ ಸೊಗಡಿನ ಭಾಷೆಯಲ್ಲೇ ಹಾಸ್ಯದ ಮೂಲಕ ಸಮಾಜವನ್ನು ಸರಿದಾರಿಗೆ ತರುವ ಒಬ್ಬ ಚಿಕ್ಕ ಪ್ರಯತ್ನ ನನ್ನದು ಎಂದರು.

#### 20 ಲಕ್ಷ ವೆಚ್ಚದಲ್ಲಿ ವಿಶ್ವ ಕರ್ಮ ಸಮುದಾಯದ ಭವನ

# ಶಾಸಕರಿಂದ ಭೂಮಿಪೂಜೆ




ಹನೂರು:–ಮುಖ್ಯ ಮಂತ್ರಿಗಳ ವಿಶೇಷ ಅನುದಾನದ ಅಡಿಯಲ್ಲಿ ಕ್ಷೇತ್ರ ವ್ಯಾಪ್ತಿಯ ಬಂಡಳ್ಳಿ ಗ್ರಾಮದಲ್ಲಿ 20 ಲಕ್ಷ ರೂ ವೆಚ್ಚದಲ್ಲಿ ವಿಶ್ವ ಕರ್ಮ ಸಮುದಾಯ ಭವನದ ನಿರ್ಮಾಣ ಕಾರ್ಯಕ್ಕೆ ಶಾಸಕರಾದ ಎಂ ಆರ್ ಮಂಜುನಾಥ್ ರವರು ಭೂಮಿ ಪೂಜೆ ನೆರವೇರಿಸಿದರು.

ಪೂಜೆ ನೆರವೇರಿಸಿ ಬಳಿಕ ಶಾಸಕರಾದ ಎಂ ಆರ್ ಮಂಜುನಾಥ್ ರವರು ಮಾತನಾಡಿ ಭವನ ಸುಂದರವಾಗಿ ನಿರ್ಮಾಣವಾಗಿ ನಿಮ್ಮೆಲ್ಲರಿಗೂ ಮದುವೆ ಸಮಾರಂಭಗಳನ್ನು ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ಮತ್ತಷ್ಟು ಅನುದಾನ ನೀಡಿ ಒಳ್ಳೆಯ ಭವನ ನಿರ್ಮಾಣ ಮಾಡಲು ಸಹಕಾರ ನೀಡುತ್ತೇನೆ. ಮುಂದಿನ ದಿನಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡುವ ಕೆಲಸ ಮಾಡುತ್ತೇನೆ ನಿಮ್ಮ ಸಮುದಾಯದ ಜೊತೆಗೆ ಸದಾ ಇರುತ್ತೇನೆ ಎಂದರು.

ಎಲ್ಲಾ ಧರ್ಮಗಳ ಜನರ ಜೊತೆ ಬಾವೈಕ್ಯತೆಯಿಂದ ನಮ್ಮ ವಿಶ್ವ ಕರ್ಮ ಸಮುದಾಯ ಜೊತೆಗಿದೆ. ವಿಶ್ವ ಕರ್ಮ ಎನ್ನುವುದು ಜಾತಿಯಲ್ಲ ಭಾರತದ ಸಂಸ್ಕೃತಿ ಇಡೀ ಭಾರತ ದೇಶಕ್ಕೆ ಒಂದು ಉತ್ತಮ ಕೊಡುಗೆಯನ್ನು ನೀಡುತ್ತಿರುವುದು ನಮ್ಮ ಸಮಾಜ. ಹಲವಾರು ವರ್ಷಗಳಿಂದ ನಮ್ಮ ಸಮುದಾಯದ ಜನರನ್ನು ಕಡೆಗಣಿಸುತ್ತಿದ್ದರು.

ಅಧಿಕಾರಕ್ಕೆರಿದ ಮೂರು ವರ್ಷದ ಅವಧಿಯಲ್ಲಿ ಹನೂರು ಕ್ಷೇತ್ರದ ಶಾಸಕ ಎಂ ಆರ್ ಮಂಜುನಾಥ್ ರವರು ನಮ್ಮ ಸಮಾಜದ ಜನರಿಗೆ 20 ಲಕ್ಷ ರೂ ಅನುದಾನದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು ಇಂದು ಭೂಮಿ ಪೂಜೆ ಮಾಡಿದ್ದಾರೆ ಸಮಸ್ತ ಸಮುದಾಯದ ಪರವಾಗಿ ಅವರಿಗೆ ನನ್ನ ದನ್ಯವಾದಗಳನ್ನು ತಿಳಿಸುತ್ತೇನೆ.ಕ್ಷೇತ್ರದಲ್ಲಿ ನೀರಾವರಿ ಯೋಜನೆ, ರಸ್ತೆಗಳು ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದೀರಾ ನಿಮ್ಮ ಸೇವೆ ಹೀಗೆ ಮುಂದುವರಿಯಲಿ ಮುಂದಿನ ದಿನಗಳಲ್ಲಿ ನಮ್ಮ ಸಮಾಜ ನಿಮ್ಮ ಜೊತೆಗಿದೆ. ವಿಶ್ವ ಕರ್ಮ ಸಮುದಾಯದ ರಾಜ್ಯಧ್ಯಕ್ಷರು ಆನೇಕಲ್ ಶ್ರೀನಿವಾಸ್ ಈ ಸಂದರ್ಭದಲ್ಲಿ ಡಾ ನಾಗಲಿಂಗಪ್ಪ, ಶ್ರೀನಿವಾಸ್,ಶಾಗ್ಯ ಬಾಬು, ಮಂಜೇಶ್, ವೆಂಕಟಚಲ, ಸಮೀಉಲ್ಲಾ,ಜೆಸ್ಸಿಮ್, ಶಂಕರಪ್ಪ,ಶಿವಮಲ್ಲಪ್ಪ,ಇನ್ನು ಮುಂತಾದವರು ಇದ್ದರು.

# ಇಂದು ಚರ್ಚ್‌ಗಳಲ್ಲಿ ಈಸ್ಟರ್




ಮೈಸೂರು: ಯೇಸು ಕ್ರಿಸ್ತನ ಪುನರುತ್ತಾನ ಹಬ್ಬವಾದ ಈಸ್ಟರ್ ಅನ್ನು ಏ.5ರಂದು ವಿಶ್ವದಾದ್ಯಂತದಂತೆ ನಗರದ ವಿವಿಧ ಚರ್ಚ್ಗಳಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ ಎಂದು ಇಂಡಿಯ ಬೈಬಲ್ ಲಿಟರೇಚರ್ ಅಪೊಸ್ಟೊಲೇಟ್ ಸಂಸ್ಥೆ ಸಂಸ್ಥಾಪಕ ರೆ.ಫಾ. ಬೆಂಜಮಿನ್ ವಾಸ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಜಗತ್ತಿನಾದ್ಯಂತ ಕ್ರೈಸ್ತರಿಗೆ ಪವಿತ್ರ ದಿನವಾಗಿದೆ. ಶಿಲುಬೆಗೇರಿ ಸಮಾಧಿಯಾದ ಮೂರು ದಿನಗಳ ನಂತರ ಯೇಸುಕ್ರಿಸ್ತ ಜಗತ್ತಿನ ಉದ್ಧಾರಕ್ಕಾಗಿ ಪುನರುತ್ಥಾನಗೊಂಡ ದಿನ ಇದಾಗಿದೆ ಎಂದು ಮಾಹಿತಿ ನೀಡಿದರು. ಬಾರ್ನಾ ಬೋಸ್ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಗಮನ ಸೆಳೆದ "ಗೀಟು ಗೀಚು"



ಮೈಸೂರು: ಬೌದ್ಧಿಕ ಅಸಮರ್ಥತೆ ಹೊಂದಿರುವ ವ್ಯಕ್ತಿ ಗಳಿಗಾಗಿ ಕಾರ್ಯನಿರ್ವಹಿಸುವ ಮೈತ್ರಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ "ಗೀಟು ಗೀಚು" ವಿದ್ಯಾರ್ಥಿಗಳ ಕಲಾಕೃತಿಗಳ ಪ್ರದರ್ಶನವನ್ನು ನಡೆಸಲಾಯಿತು.

20ಕ್ಕೂ ಹೆಚ್ಚು ಮಂದಿ ವಿಶೇಷಚೇತನರೇ ಸೇರಿ ಹೊರತಂದ ಈ ವಿಭಿನ್ನ ಚಿತ್ರವನ್ನು ಎಲ್ಲರೂ ನೋಡಿ ಸಂತಸ ಪಟ್ಟರು. ಇನ್ನೂ ವಿಶೇಷಚೇತರನು ಚಿತ್ರಗಳನ್ನು ಸ್ಪರ್ಶಿಸಿ ಅವುಗಳ ವಿಭಿನ್ನತೆ ಅರಿತುಕೊಂಡಿದ್ದು ವಿಶೇಷ. ಪ್ರದರ್ಶನವನ್ನು ಮೈಸೂರು ಬುಕ್ ಕ್ಲಬ್ ಚಾರಿಟೇಬಲ್ ಟ್ರಸ್ಟ್ ಮತ್ತು ಮೈಸೂರು ಸಾಹಿತ್ಯೋತ್ಸವದ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ನವ ಪ್ರೇರಣಾ ಫೌಂಡೇಶನ್ ಸಂಸ್ಥಾಪಕಿ ಸಸ್ಕೃತಿ ಸಿಂಗ್ ಅತಿಥಿಯಾಗಿ ಭಾಗವಹಿಸಿದ್ದರು.



# ಇಂದು ಬಾಬುಜೀ119ನೇ ಜಯಂತಿ

ರಾಮನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರ ನಾಯಕ, ಭಾರತದ ಮಾಜಿ ಉಪ ಪ್ರಧಾನ ಮಂತ್ರಿಗಳಾದ ಡಾ. ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿಯನ್ನು ಏ.5ರ ಭಾನುವಾರ ಆಯೋಜಿಸಲಾಗಿದೆ.



ಅಂದು ಬೆಳಿಗ್ಗೆ 9.30ಕ್ಕೆ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಿಂದ ಡಾ. ಬಿ. ಆರ್. ಅಂಬೇಡ್ಕರ್ ಭವನದವರೆಗೆ ಶ್ರೀ ಡಾ. ಬಾಬು ಜಗಜೀವನ್ ರಾಂ ರವರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿ ಮೆರವಣಿಗೆ ಮಾಡಲಾಗುವುದು. ನಂತರ ಬೆಳಿಗ್ಗೆ 11 ಗಂಟೆಗೆ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಾಜ್ಯದ ಉಪ ಮುಖ್ಯಮಂತ್ರಿಗಳು, ಭಾರಿ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರ ಅಭಿವೃದ್ಧಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್. ಸಿ. ಮಹದೇವಪ್ಪ ಅವರು ಕಾರ್ಯಕ್ರಮದಲ್ಲಿ ಘನ ಉಪಸ್ಥಿತಿ ವಹಿಸುವರು. ಸಾರಿಗೆ, ಸಚಿವ ರಾಮ ಲಿಂಗಾರೆಡ್ಡಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅಧ್ಯಕ್ಷತೆ ವಹಿಸುವರು. ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಡಾ.ಕೆ.ಸುಧಾಕರ್, ಶಾಸಕರಾದ ಎಚ್.ಸಿ. ಬಾಲಕೃಷ್ಣ, ಸಿ.ಪಿ.ಯೋಗೇಶ್ವರ, ಎನ್. ಶ್ರೀನಿವಾಸ್, ಪುಟ್ಟಣ್ಣ, ಎಸ್. ರವಿ, ವಿಧಾನ ಪರಿಷತ್ ಸದಸ್ಯ ಸುಧಾಮ್ ದಾಸ್, ರಾಮೋಜಿ ಗೌಡ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, ಬೆಂಗಳೂರು ದಕ್ಷಿಣ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ. ರಾಜು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷ ಗಂಗಾಧರ್, ಬಿ.ಎಂ.ಐ.ಸಿ.ಪಿ.ಎ ಅಧ್ಯಕ್ಷ ರಘುನಂದನ್ ರಾಮಣ್ಣ, ಭಾಗವಹಿಸುವರು.

# ತೋಟದ ಮನೆ ಬಳಿ ಚಿರತೆ ಸಂಚಾರ

ಗುಂಡ್ಲುಪೇಟೆ: ತಾಲೂಕಿನ ಶಿವಪುರ ಗ್ರಾಮದ ರೈತರೊಬ್ಬರ ತೋಟದ ಮನೆ ಬಳಿ ಚಿರತೆ ಸಂಚರಿಸಿದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ರೈತರು ಆತಂಕಗೊಂಡಿದ್ದಾರೆ.

ಗ್ರಾಮದ ಲೋಕೇಶ್ ಎಂಬುವರ ಜಮೀನಿನಲ್ಲಿ ಶನಿವಾರ ರಾತ್ರಿ 2.45 ರ ಸಮಯದಲ್ಲಿ ಬರುವ ಚಿರತೆ ಕಾರಿನ ಮುಂಭಾಗದಿಂದ ಹಾದು ಹೋಗುತ್ತದೆ, ಕಾರಿನ ಹಿಂಬದಿಯಲ್ಲಿ ಮಲಗಿದ್ದ ಸಾಕು ನಾಯಿಯನ್ನು ಹಿಡಿಯಲು ಪ್ರಯತ್ನಿಸುತ್ತದೆ, ಅದೇ ವೇಳೆಗೆ ಆಕಸ್ಮಿಕವಾಗಿ ಮನೆಯವರು ಹೊರಗೆ ಬರುತ್ತಾರೆ. ಇದರಿಂದ ವಿಚಲಿತವಾದ ಚಿರತೆ ನಾಯಿಯನ್ನು ಬಿಟ್ಟು ಓಡಿ ಹೋಗಿದೆ. ವಾರದ ಹಿಂದೆ ಗ್ರಾಮದ ಕಲ್ಲುಕಟ್ಟೆ ಕೆರೆ ಬಳಿ ತೋಟದ ಮನೆ ಬಳಿಗೆ ಚಿರತೆ ಬಂದು ಹೋಗಿದ್ದ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿತ್ತು. ಈತ ಅದೇ ಪ್ರದೇಶಕ್ಕೆ ಸಮೀಪ ಇರುವ ತೋಟದ ಮನೆ ಬಳಿ ಚಿರತೆ ಕಾಣಿಸಿಕೊಂಡಿದೆ, ಚಿರತೆ ನಮ್ಮ ಗ್ರಾಮದ ಸುತ್ತಲೂ ಸುತ್ತಾಡುತ್ತಿದ್ದು, ಸಾಕುನಾಯಿಗಳು ಮತ್ತು ಜಾನುವಾರುಗಳನ್ನು ಗುರಿಯಾಗಿಸಿಕೊಂಡು ಬರುತ್ತಿದೆ. ರಾತ್ರಿ ವೇಳೆ ಹೊರಗೆ ಬರುವ ಜನರ ಮೇಲೆ ಚಿರತೆ ದಾಳಿ ನಡೆಸುವ ಸಾಧ್ಯತೆ ಇರುತ್ತದೆ, ಆದ್ದರಿಂದ ಸಂಬಂಧಪಟ್ಟ ವರು ಚಿರತೆ ಸೆರೆಗೆ ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘಟನೆ ಜಿಲ್ಲಾಧ್ಯಕ್ಷ ಶಿವಪುರಮಹದೇವಪ್ಪ ಒತ್ತಾಯಿಸಿದ್ದಾರೆ



**ತಹಶೀಲ್ದಾರ್ ಗಿರಿಜಾ ಕರೆ**

# ಜನಗಣತಿ ದೇಶದ ಸಮಗ, ಅಭಿವೃದ್ಧಿಗೆ ಪೂರಕ ಭಾಗವಹಿಸಿ

ಚಾಮರಾಜನಗರ, ರಾಷ್ಟ್ರೀಯ ಜನಗಣತಿ : 2026 ದೇಶದ ಸಮಗ್ರ ಅಭಿವೃದ್ಧಿಕ್ಕೆ ಪೂರಕವಾಗಿದ್ದು, ಪ್ರತಿಯೊಬ್ಬರು ಜನಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ನಿಖರವಾದ ಮಾಹಿತಿ ನೀಡುವ ಮೂಲಕ ದೇಶದ ಪ್ರಗತಿಯಲ್ಲಿ ಎಲ್ಲರು ಪಾಲ್ಗೋಳ್ಳಬೇಕೆಂದು ತಹಶೀಲ್ದಾರ್ ಗಿರಿಜಾ ತಿಳಿಸಿದರು.




ನಗರದ ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ಅವರಣದಲ್ಲಿ ತಾಲೂಕಿನ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಏರ್ಪಡಿಸಿರುವ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈಗಾಗಲೇ ಏ.1 ರಿಂದ ಜನಗಣತಿ ಪ್ರಕ್ರಿಯೆ ಆರಂಭವಾಗಿದ್ದು, ಈ ಗಣತಿಗೆ ಆಯ್ಕೆಯಾಗಿರುವ ಶಿಕ್ಷಕರು ಹಾಗೂ ಅಧಿಕಾರಿಗಳಿಗೆ ಮೊದಲ ಹಂತದ ತರಬೇತಿಯನ್ನು ಆಯೋಜನೆ ಮಾಡಲಾಗಿದೆ. ಗಣತಿ ಕಾರ್ಯಕ್ಕೆ ನಿಯೋಜನೆಗೊಂಡಿರುವ ಪ್ರೌಢಶಾಲೆ ಹಾಗೂ ಪ್ರಾಥ ಮಿಕ ಶಾಲೆಯ ಶಿಕ್ಷಕರು ನಿಗಧಿತ ಅವಧಿಗೆ ತರಬೇತಿಗೆ ಆಗಮಿಸಿ,ಸಂಪನ್ಮೂಲ ವ್ಯಕ್ತಿಗಳು ಹೇಳುವ ಎಲ್ಲಾ ರೀತಿಯ ಮಾಹಿತಿಗಳನ್ನು ತಿಳಿದು ಕೊಳ್ಳಬೇಕು. ಜೊತೆಗೆ ಗಣತಿ ಸಂದರ್ಭದಲ್ಲಿ ಯಾವುದೇ ಗೊಂದಲಕ್ಕೆ ಅಸ್ಪದ ನೀಡಬೇಡಿ, ಯಾವುದೇ ಸಂಶಯ ಇದ್ದರು ಸಹ ತರಬೇತಿ ಅವಧಿಯಲ್ಲಿ ಬಗೆಹರಿಸಿಕೊಂಡು ಪರಿಪಕ್ವತೆ ಯೊಂದಿಗೆ ಗಣತಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಜನಗಣತಿ –2026ರ ಸಂಬಂಧ ಗಣತಿದಾರರು ಮತ್ತು ಮೇಲ್ವಿಚಾರಕರುಗಳಿಗೆ ಇಂದಿನಿಂದ ಏ. 11 ರವರೆಗೆ ಮೂರು ಗುಂಪುಗಳಾಗಿ ವಿಂಗಡಣೆ ಮಾಡಿ ತರಬೇತಿ ನೀಡಲಾಗುತ್ತಿದೆ. ಪ್ರತಿ ಗುಂಪಿಗೂ 3 ದಿನಗಳಂತೆ ಒಟ್ಟು 9 ದಿನ ತರಬೇತಿ ನೀಡಲಾಗುತ್ತದೆ. 520 ಮಂದಿ ಗಣತಿದಾರರು, 87 ಮಂದಿ ಮೇಲ್ವಿಚಾರಕರು ಹಾಗೂ 12 ಮಂದಿ ತರಬೇತಿದಾರನ್ನು ನಿಯೋಜನೆ ಮಾಡಲಾಗಿದೆ ಎಂದರು.

ರಾಷ್ಟ್ರೀಯ ಜನಗಣತಿಯು ದೇಶದ ಅರ್ಥಿಕ ವ್ಯವಸ್ಥೆಯನ್ನು ಬಲಪಡಿಸುವ ಜೊತೆಗೆ ನಿಖರವಾದ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಲಭ್ಯವನ್ನು ಕಲ್ಪಿಸಲು ಸಹಕಾರಿಯಾಗುತ್ತದೆ. ದೇಶದ ಶಿಕ್ಷಣ, ಉದ್ಯೋಗ, ವಾಸ ಸ್ಥಳ ಹಾಗೂ ಆಯಾ ಪ್ರದೇಶದಲ್ಲಿರುವ ಜನರ ಜೀವನ ಕ್ರಮಗಳು, ಸ್ಥಿತಿಗತಿಯನ್ನು ಅರಿಯಲು ಜನಗಣತಿ ಮಹತ್ವಪೂರ್ಣವಾಗಿದೆ. ಹೀಗಾಗಿ ಗಣತಿ ಮಾಡುವಾಗ ಎಲ್ಲಾ ರೀತಿಯ ಸೂಕ್ಷ್ಮತೆಯನ್ನು ಅರಿತು ಜನರೊಂದಿಗೆ ಬೆರೆತು ಅವರಿಂದ ಪೂರಕವಾದ ಮಾಹಿತಿಗಳನ್ನು ಪಡೆದು ನಿಖರವಾದ ಮಾಹಿತಿಯನ್ನಷ್ಟೇ ದಾಖಲು ಮಾಡುವ ಮೂಲಕ ಜನಗಣತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು ಎಂದು ತಹಶೀಲ್ದಾರ್ ಗಿರಿಜಾ ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಶಿರಸ್ತೇದಾರ್ ಆರ್. ಪ್ರಕಾಶ್, ರಾಜಸ್ವ ನಿರೀಕ್ಷಕ ರಾಜಶೇಖರಮೂರ್ತಿ, ಜಯಪ್ಪ, ಷಡಕ್ಷರಸ್ವಾಮಿ, ಗ್ರಾಮ ಆಡಳಿತಾಧಿಕಾರಿಗಳಾದ ಸಂತೋಷಕುಮಾರ್, ರಾಜೇಂದ್ರಪ್ರಸಾದ್, ಚಿಕ್ಕಣ್ಣ, ಹಾಜರಿದ್ದರು.

# ಬಾಲಕಾರ್ಮಿಕರಿಂದ ದುಡಿಸಿಕೊಳ್ಳುವವರ ವಿರುದ್ಧ ಕ್ರಮ ಜರುಗಿಸಿ: ಡಿಸಿ



ಚಾಮರಾಜನಗರ, ಜಿಲ್ಲೆಯ ಇಟ್ಟಿಗೆ ಕಾರ್ಖಾನೆ, ಅಂಗಡಿ, ಉದ್ಯಮ, ಗ್ಯಾರೇಜ್, ಎಸ್ಟೇಟ್, ಇನ್ನಿತರ ಕಡೆ ಅನಿರೀಕ್ಷಿತ ಭೇಟಿ ನೀಡಿ ಬಾಲಕಾರ್ಮಿಕರು ದುಡಿಮೆ ಮಾಡುತ್ತಿರುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟ ಮಾಲೀಕರ ವಿರುದ್ದ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ದತಿ ನಿರ್ಮೂಲನೆ ಸಂಬಂಧ ನಡೆದ ಜಿಲ್ಲಾ ಮಟ್ಟದ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಾಲಕಾರ್ಮಿಕ ಪದ್ದತಿಯು ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೆ ಒಳಪಡಿಸಿ ಅವರ ಶಿಕ್ಷಣ ಹಾಗೂ ಸರ್ವಾಂಗೀಣ ಪ್ರಗತಿಯ ಅವಕಾಶಗಳನ್ನು ತಡೆಗಟ್ಟಲಿವೆ. ದುಡಿಮೆಯಲ್ಲಿ ತೊಡಗಿರುವ ಶಿಕ್ಷಣ ವಂಚಿತ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರಬೇಕಿದೆ. ಜಿಲ್ಲೆಯ ಯಾವುದೇ ಉದ್ಯಮ, ಕೆಲಸ ಮಾಡುವ ಸ್ಥಳಗಳಲ್ಲಿ ಬಾಲಕಾರ್ಮಿಕರಿಂದ ದುಡಿಸಿಕೊಳ್ಳುವುದು ಅಪರಾಧವಾಗಲಿದೆ. ಕಾರ್ಮಿಕ ಇಲಾಖೆ ಅಧಿಕಾರಿಗಳು ವ್ಯಾಪಕವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದರು.

ವಿಶೇಷವಾಗಿ ಕೈಗಾರಿಕಾ ಪ್ರದೇಶಗಳು, ಬೇರೆ ರಾಜ್ಯಗಳಿಂದ ವಲಸೆ ಬಂದಿರುವ ಕುಟುಂಬ, ಹಾಡಿ ವ್ಯಾಪ್ತಿಯಲ್ಲಿರುವ ಎಸ್ಟೇಟ್, ಇನ್ನಿತರ ಕಡೆ ಭೇಟಿ ನೀಡಬೇಕು. ಬಾಲಕಾರ್ಮಿಕರನ್ನು ದುಡಿಸಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಖುದ್ದು ಪರಿಶೀಲಿಸಬೇಕು. ಅಪಾಯಕಾರಿ ಉದ್ಯಮಗಳಲ್ಲಿ ಕಿಶೋರ ಕಾರ್ಮಿಕರನ್ನು ದುಡಿಸಿಕೊಳ್ಳುವಂತಿಲ್ಲ. ಇಂತಹಕಡೆ ನಿಗದಿತ ಅವಧಿಗೂ ಹೆಚ್ಚು ಕಾಲ ಕೆಲಸ ಮಾಡುತ್ತಿರುವುದು ಕಂಡುಬಂದಲ್ಲಿ ಕ್ರಮ ವಹಿಸಬೇಕು ಎಂದು ನಿರ್ದೇಶನ ನೀಡಿದರು.

14ವರ್ಷದೊಳಗಿನ ಮಕ್ಕಳು ಯಾವುದೇ ಉದ್ಯೋಗ ಅಥವಾ ಪ್ರಕ್ರಿಯೆಗಳಲ್ಲಿ ತೊಡಗಿದ್ದರೆ ಮತ್ತು 18 ವರ್ಷ ವಯಸ್ಸಿನವರೆಗಿನ ಕಿಶೋರರು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸ ಮಾಡುವುದು ಕಂಡುಬಂದಲ್ಲಿ ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಕಂದಾಯ, ಪಂಚಾಯತ್ ರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ನಗರಾಭಿವೃದ್ಧಿ, ಕರ್ಖಾನೆ ಮತ್ತು ಬಾಯ್ಲರ್ ಗಳ ಇಲಾಖೆ, ರೇಷ್ಮೆ, ಕೃಷಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗಳ ಅಧಿಕಾರಿಗಳನ್ನು ಸಂಪರ್ಕಿಸಿ ಸಾರ್ವಜನಿಕರು ದೂರು ನೀಡಬಹುದು. ಅಲ್ಲದೇ ಈ ಇಲಾಖೆಗಳ ಅಧಿಕಾರಿಗಳು ಉದ್ಯಮಗಳಿಗೆ ಭೇಟಿ ನೀಡಿ ಬಾಲಕಾರ್ಮಿಕರನ್ನು ದುಡಿಸಿಕೊಳುತ್ತಿದ್ದಲ್ಲಿ ಸ್ವಯಂ ಪ್ರೇರಿತವಾಗಿ ದೂರು ದಾಖಲು ಮಾಡಿಕೊಳ್ಳಬೇಕು ಎಂದರು.

ಶಾಲೆ ತೊರೆದ ಮಕ್ಕಳ ಬಗ್ಗೆ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕು. 5 ಹಾಗೂ 7ನೇ ತರಗತಿ ಬಳಿಕ ಮಕ್ಕಳು ಶಾಲೆಗೆ ದಾಖಲಾಗುತ್ತುದ್ದಾರೆಯೇ ಎಂಬ ಬಗ್ಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಒಂದು ವೇಳೆ ಶಾಲೆಗೆ ದಾಖಲಾಗದಿದ್ದರೆ ಅಥವಾ ನಿರಂತರವಾಗಿ ಗೈರು ಹಾಜರಾಗುತ್ತಿರುವುದು ಕಂಡು ಬಂದಲ್ಲಿ ಕೂಡಲೇ ಪೋಷಕರ ಮನೆಗೆ ತೆರಳಿ ಮನವೊಲಿಸಿ ಮಕ್ಕಳನ್ನು ಶಾಲೆಗೆ ದಾಖಲು ಮಾಡಲು ಪ್ರೇರೇಪಿಸಬೇಕು ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ ಅವರು ಮಾತನಾಡಿ ಅಪಾಯಕಾರಿಯಲ್ಲದ ಉದ್ಯಮಗಳಲ್ಲಿ ಕಿಶೋರರನ್ನು ನೇಮಿಸಿಕೊಂಡಾಗ ಪಾಲಿಸಬೇಕಾದ ಷರತ್ತು ಹಾಗೂ ನಿಬಂಧನೆಗಳನ್ನು ಕೆಲಸದ ಸ್ಥಳಗಳಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸಬೇಕು. ವಿಶ್ರಾಂತಿ ಹಾಗೂ ಕೆಲಸದ ಅವಧಿಯನ್ನು ನಿಯಮಾನುಸಾರ ಗೊತ್ತು ಮಾಡಬೇಕು. ಯಾವುದೇ ಉಲ್ಲಂಘನೆಯಾದರೆ ದೂರು ದಾಖಲಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್ ಅವರು ಮಾತನಾಡಿ ಬಾಲಕಾರ್ಮಿಕ ಪದ್ದತಿ ನಿಷೇಧಕ್ಕೆ ಸಂಬಂಧಿಸಿದಂತೆ ಅನುಸರಿಸಲಾಗುವ ಎಲ್ಲ ಪ್ರಕ್ರಿಯೆಗಳಲ್ಲಿ ಪೊಲೀಸ್ ಇಲಾಖೆ ನೆರವು ನೀಡಲಿದೆ. ಎಲ್ಲಿಯೇ ಆಗಲಿ ಬಾಲಕಾರ್ಮಿಕರು ದುಡಿಯುತ್ತಿರುವ ಮಾಹಿತಿ ನೀಡಿದ್ದಲ್ಲಿ ಮುಂದಿನ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಇದೇ ವೇಳೆ ಬಾಲಕಾರ್ಮಿಕ ಪದ್ದತಿ, ಬಾಲ್ಯವಿವಾಹ ನಿಷೇಧ ಕುರಿತ ಮಾಹಿತಿ ನೀಡುವ ಪೋಸ್ಟರ್ ಗಳನ್ನು ಬಿಡುಗಡೆ ಮಾಡಲಾಯಿತು.

ಜಿಲ್ಲಾ ಕಾರ್ಮಿಕ ಅಧಿಕಾರಿ ಟಿ.ಸಿ. ರಾಮಚಂದ್ರಯ್ಯ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕರಾದ ಎಂ. ಮಹೇಶ್, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ಅರುಣ್ ಕುಮಾರ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟೀಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಸುರೇಶ್, ಮಕ್ಕಳ ರಕ್ಷಣಾಧಿಕಾರಿ ಮಂಜುಳಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ವೀರನಪುರ ಕಾಲೋನಿ ಚರಂಡಿ ಸಮಸ್ಯೆಗೆ ಮುಕ್ತಿ

**16ನೇ ಹಣಕಾಸು ಯೋಜನೆಯಡಿ ಕಾಮಗಾರಿ ಆರಂಭ**
**ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಸೂಚನೆ; ಸ್ಥಳ ಪರಿಶೀಲನೆ ನಡೆಸಿದ ಪುರಸಭೆ ಮುಖ್ಯಾಧಿಕಾರಿ ಶರವಣ**



ಗುಂಡ್ಲುಪೇಟೆ: ಪುರಸಭೆ ವ್ಯಾಪ್ತಿಯ ವೀರನಪುರ ಕಾಲೋನಿಯಲ್ಲಿ ಮಳೆಗಾಲದಲ್ಲಿ ಎದುರಾಗುತ್ತಿದ್ದ ಚರಂಡಿ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಅವರ ಸೂಚನೆಯಂತೆ 16ನೇ ಹಣಕಾಸು ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.

**ಸ್ಥಳಕ್ಕೆ ಪುರಸಭೆ ಮುಖ್ಯಾಧಿಕಾರಿಗಳ ಭೇಟಿ:**



ಕೇಂದ್ರ ಸರ್ಕಾರದ 16ನೇ ಹಣಕಾಸು ಯೋಜನೆಯಡಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗಾಗಿ 54 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ. ಈ ಅನುದಾನವನ್ನು ದುರ್ಬಳಕೆ ಮಾಡದೆ, ಅತ್ಯಂತ ಅವಶ್ಯಕತೆ ಇರುವ ಕಡೆಗಳಲ್ಲಿ ಮಾತ್ರ ಬಳಸುವಂತೆ ಶಾಸಕರು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಎಸ್. ಶರವಣ ಅವರು ಶನಿವಾರ ಬೆಳಿಗ್ಗೆ ವೀರನಪುರ ಕಾಲೋನಿಗೆ ಭೇಟಿ ನೀಡಿ, ಚರಂಡಿ ನಿರ್ಮಾಣವಾಗಬೇಕಿರುವ ಜಾಗವನ್ನು ಓಡೋಮೀಟರ್ ಮೂಲಕ ಅಳತೆ ಮಾಡಿಸಿ ಖುದ್ದಾಗಿ ಪರಿಶೀಲಿಸಿದರು.

**ಸಾರ್ವಜನಿಕರ ಮನವಿಗೆ ಸ್ಪಂದನೆ:**

ವೀರನಪುರ ಕಾಲೋನಿಯಲ್ಲಿ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಮಳೆ ನೀರು ಸರಾಗವಾಗಿ ಹರಿಯಲು ಅಡಚಣೆಯಾಗುತ್ತಿತ್ತು. ಇದ ರಿಂದ ಸಾರ್ವಜನಿಕರು ಅನುಭವಿಸುತ್ತಿದ್ದ ತೊಂದರೆಯನ್ನು ಗಮನಿಸಿದ ಶಾಸಕರು, ಈ ಪ್ರದೇಶಕ್ಕೆ ಮೊದಲ ಆದ್ಯತೆ ನೀಡಿ ಕಾಮಗಾರಿ ಕೈಗೆತ್ತಿಕೊಳ್ಳಲು ಆದೇಶಿಸಿದ್ದರು. ಅದರಂತೆ ಈಗ ಚರಂಡಿ ನಿರ್ಮಾಣ ಕಾರ್ಯಕ್ಕೆ ವೇಗ ನೀಡಲಾಗಿದ್ದು, ವಾರ್ಡ್ ನಂಬರ್ 23 ರಲ್ಲೂ ಅಭಿವೃದ್ಧಿ ಕೆಲಸಗಳನ್ನು ಆರಂಭಿಸಲಾಗಿದೆ.

ಪರಿಶೀಲನೆಯ ಸಂದರ್ಭದಲ್ಲಿ ಪುರಸಭೆಯ ಕಿರಿಯ ಅಭಿಯಂತರರಾದ ಮಂಜುನಾಥ್ ಹಾಗೂ ಹಿರಿಯ ಆರೋಗ್ಯ ನಿರೀಕ್ಷಕ ಪರಮೇಶ್ ಉಪಸ್ಥಿತರಿದ್ದರು.

**ಎರಡು ತಿಂಗಳ ಗಡುವು:**

**ಕಳೆದ ತಿಂಗಳಷ್ಟೇ ಎಸ್ಎಫ್‌ಸಿ ಕುಡಿಯುವ ನೀರು ಯೋಜನೆಯಡಿ ಈ ಭಾಗದಲ್ಲಿ ಹೊಸದಾಗಿ ಕೊಳವೆಬಾವಿ ಕೊರೆಸಿ ನೀರಿನ ಸಂಪರ್ಕ ಕಲ್ಪಿಸಲಾಗಿತ್ತು. ಈಗ ಚರಂಡಿ ಕಾಮಗಾರಿಯನ್ನು ಮುಂದಿನ ಎರಡು ತಿಂಗಳ ಒಳಗಾಗಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಪುರಸಬೆ ಮುಖ್ಯಾಧಿಕಾರಿ ಗಳು ಭರವಸೆ ನೀಡಿದರು.**

# ಏ.14ರಂದು ವಿಜೃಂಭಣೆಯ ಡಾ.ಅಂಬೇಡ್ಕರ್ ಜಯಂತಿ

**ಶಾಸಕ ಎಂ.ಆರ್.ಮಂಜುನಾಥ್ ಮಾಹಿತಿ | ಪೂರ್ವಭಾವಿ ಸಭೆ**



ಹನೂರು: ಡಾ.ಬಿಆರ್.ಅಂಬೇಡ್ಕರ್ ಜಯಂತಿಯನ್ನು ಏಪ್ರಿಲ್ 14ರಂದು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಸಮುದಾಯದ ಮುಖಂಡರು ಸಲಹೆ, ಸೂಚನೆ ನೀಡುವುದರ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಶಾಸಕ ಎಂಆರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆ ವಸತಿಗೃಹದಲ್ಲಿ ಹಮ್ಮಿಕೊಂಡಿದ್ದ ಡಾ ಬಿ.ಆರ್ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ನಿಯಮಾನುಸಾರವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಜೊತೆಗೆ ಕಾರ್ಯಕ್ರಮದ ರೂಪರೇಷಗಳ ಬಗ್ಗೆ ವಿವಿಧ ಗ್ರಾಮಗಳಿಂದ ಬಂದಿರುವಂತಹ ಯಜಮಾನರು, ಸಮುದಾಯದ ಮುಖಂಡರು ಸಲಹೆಗಳನ್ನು ನೀಡಬೇಕು. ಜಯಂತಿ ಕಾರ್ಯಕ್ರಮ ಕೇವಲ ಆಚರಣೆಗೆ ಸೀಮಿತವಾಗದೆ ಅವರು ಹಾಕಿ ಕೊಟ್ಟಂತಹ ಮಾರ್ಗದರ್ಶನಗಳನ್ನು ನಾವು ಪಾಲನೆ ಮಾಡಬೇಕು. ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಇಂತಹ ವಿಜೃಂಭಣೆಯ ಕಾರ್ಯಕ್ರಮಗಳಿಗೆ ಅರ್ಥ ಸಿಗುತ್ತದೆ ಎಂದರು.

ಸಮುದಾಯದ ಮುಖಂಡರು ಮಾತನಾಡಿ ನಾವು ಈಗಾಗಲೇ ತೀರ್ಮಾನ ಮಾಡಿದಂತೆ ಏಪ್ರಿಲ್ ತಿಂಗಳ 12,13,14 ರ ಮೂರು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡಲು ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದೇವೆ. ಜೊತೆಗೆ ಇಲಾಖೆಯ ನಿಯಮಾನುಸಾರವಾಗಿ ತಾವು ಮಾಡುವ ಕಾರ್ಯಕ್ರಮಕ್ಕೂ ಸಹ ನಮ್ಮ ಬೆಂಬಲ ಸದಾ ಇರುತ್ತದೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ತಹಶೀಲ್ದಾರ್ ಚೈತ್ರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೇಶವ ಮೂರ್ತಿ,ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರೇಖಾ, ಬಿ ಇ ಒ ಮಹೇಶ್, ಸಿ ಡಿ ಪಿ ಒ ಅಂಬಿಕಾ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ್, ಹಾಗೂ ತಾಲೂಕು ಮಟ್ಟದ ವಿವಿಧ ಅಧಿಕಾರಿಗಳು ಹಾಗೂ ತಾಲೂಕಿನ ವಿವಿಧ ಗ್ರಾಮಗಳ ಸಮುದಾಯದ ಮುಖಂಡರು ಇದ್ದರು.

**ಒಳ ಮೀಸಲಾತಿ ಸರಿಪಡಿಸುವವರೆಗೂ ಹಬ್ಬಗಳ ಬಹಿಷ್ಕಾರ**

**ನಾಗಮೋಹನ್ ದಾಸ್ ವರದಿ ತಿರಸ್ಕಾರ ಮಾಡಿ ಒಳ ಮೀಸಲಾತಿ ಸರಿಪಡಿಸುವವರೆಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಮಾಡುವ ಎಲ್ಲಾ ಕಾರ್ಯಕ್ರಮಗಳನ್ನು ಬಹಿಷ್ಕಾರ ಮಾಡುತ್ತೇವೆ, ನಮ್ಮ ಸಮುದಾಯದ ವತಿಯಿಂದಲೇ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿಯನ್ನು ಆಚರಣೆ ಮಾಡಿಕೊಳ್ಳುತ್ತೇವೆ ಎಂದು ಛಲವಾದಿ ಮಹಾಸಭಾಧ್ಯಕ್ಷ ಬಸವರಾಜು ತಿಳಿಸಿದರು.**

## ಪ್ರತಿಷ್ಠಿತ ಶಾಲೆಗೆ ದಾಖಲು; ಅರ್ಜಿ ಆಹ್ವಾನ

ಮಡಿಕೇರಿ:–2026–27ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಪರಿಶಿಷ್ಟ ಜಾತಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಏಪ್ರಿಲ್, 15 ಪ್ರಾರಂಭದ ದಿನವಾಗಿದೆ. ಅರ್ಜಿ ಸಲ್ಲಿಸಲು ಮೇ, 04 ಕೊನೆಯ ದಿನವಾಗಿದೆ. ಮೇ, 06 ರಂದು ಅರ್ಜಿಗಳ ಪರಿಶೀಲನೆ, ಮೇ, 12 ರಂದು ಪ್ರವೇಶ ಪರೀಕ್ಷೆ, ಮೇ, 15 ರಂದು ಪ್ರವೇಶ ಪರೀಕ್ಷೆ ಫಲಿತಾಂಶ ಘೋಷಣೆ, ಮೇ, 19ರಂದು ಅರ್ಹ ವಿದ್ಯಾರ್ಥಿಗಳನ್ನು ಕೌನ್ಸೆಲಿಂಗ್ ಮೂಲಕ ಆಯ್ಕೆ ಮಾಡುವುದು, ಆಯ್ಕೆಯಾದ ಶಾಲೆಗೆ ದಾಖಲಾಗಲು ಮೇ,30ಕೊನೆಯ ದಿನವಾಗಿದೆ.

**ಅರ್ಜಿ ಸಲ್ಲಿಸುವ ವಿಧಾನ**

ಸಮಾಜ ಕಲ್ಯಾಣ ಇಲಾಖೆಯ ವೆಬ್ ಸೈಟ್ https://swd.karnataka.gov.in/ ಅನ್ನು ಬಳಸಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು 5 ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಗಳಿಸಿರಬೇಕು. ಆಯ್ಕೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಜಿಲ್ಲೆಯ ಪ್ರತಿಷ್ಠಿತ ಶಾಲೆಯಲ್ಲಿ 6ನೇ ತರಗತಿಗೆ ಪ್ರವೇಶ ಅವಕಾಶವನ್ನು ಕಲ್ಪಿಸಲಾಗುವುದು, ವಿದ್ಯಾರ್ಥಿಗಳಿಂದ ಜಾತಿ ದೃಢೀಕರಣ ಪ್ರಮಾಣ ಪತ್ರ, ಆದಾಯ ದೃಢೀಕರಣ ಪತ್ರ ಹಾಗೂ ಮುಖ್ಯೋಪಾಧ್ಯಾಯರಿಂದ ದೃಢೀಕೃತಗೊಂಡ ಅಂಕ ಪಟ್ಟಿಯನ್ನು ಸಲ್ಲಿಸುವುದು. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪೋಷಕರ ಆದಾಯ ಮಿತಿ ರೂ.2 ಲಕ್ಷ ಒಳಗೆ ಇರಬೇಕು. (ಈ ಬಗ್ಗೆ ತಹಶೀಲ್ದಾರರವರಿಂದ ಪಡೆದ ಆದಾಯ ಪ್ರಮಾಣ ಪತ್ರ ಸಲ್ಲಿಸುವುದು).

ಅರ್ಜಿ ಪಡೆಯಲು ಉಪನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಕೊಡಗು ಜಿಲ್ಲೆ, ಮಡಿಕೇರಿ 9480843037, ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಮಡಿಕೇರಿ 9480843155, ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಸೋಮವಾರಪೇಟೆ 9480843156, ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಪೊನ್ನಂಪೇಟೆ 9480843157 ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಇಂದು ಹೆರಿಟೇಜ್ ಕಪ್



ಮೈಸೂರು: ನಿರಾಮಯ ಫೌಂಡೇಷನ್ ವತಿಯಿಂದ ದೃಷ್ಟಿ ವಿಶೇಷ ಚೇತನ ಮಹಿಳೆಯರಿಗಾಗಿ ಏ.5 ರಂದು ಬನ್ನಿಮಂಟಪದ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಆವರಣದ ಮೈದಾನದಲ್ಲಿ ಹೆರಿಟೇಜ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ಆರ್. ರಕ್ಷಿತಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 7ಕ್ಕೆ ಇನ್ನರ್ ವ್ಹೀಲ್ ಮೈಸೂರು ಕ್ಲಬ್‌ನ ವೈ. ವಿದ್ಯಾ, ವಿಷನ್ ಎಂಪವರ್ ಟ್ರಸ್ಟ್ನ ಮುರಳಿ ಶ್ರೀನಿವಾಸಯ್ಯ, ಹವಾಯ್ ಸ್ಟ್ರೀಲ್‌ನ ಗೋಪಯ್ಯ ಚಾಲನೆ ನೀಡಲಿದ್ದಾರೆ. ಸುನೀತಾ ಎನ್. ದೊಡ್ಡಪ್ಪನವರ ಅತಿಥಿಗಳಾಗಿರುವರು. ನಿರಾಮಯ ತಂಡ, ಬೆಮಗಳೂರಿನ ದೀಪಾ ಅಕಾಡೆಮಿ ಮತ್ತು ಸ್ನೇಹದೀಪ ಸಂಸ್ಥೆ, ರಂಗರಾವ್ ಸ್ಕೂಲ್ಸ್, ಆಶಾದೀಪ ತಂಡಗಳು ಈ ಪ್ರತಿಷ್ಠಿತ ಕಪ್‌ಗಾಗಿ ಸೆಣೆಸಾಡಲಿವೆ. ಮೊದಲನೇ ಬಹುಮಾನವಾಗಿ 15 ಸಾವಿರ, 2 ನೇ ಬಹುಮಾನವಾಗಿ 14 ಸಾವಿರ ನೀಡಿ, ಅದನ್ನು ತಂಡದ ಪ್ರತಿಂಬೊಬ್ಬ ಆಟಗಾರ್ತಿಯರಿಗೂ ಹಂಚಲಾಗುವುದು ಎಂದು ಮಾಹಿತಿ ನೀಡಿದರು. ಸಂಸ್ಥೆಯ ನೂತನ್, ಗುರುಪ್ರೀತ್, ಸಂದೀಪ್ ಇದ್ದರು.

## ಬಸವ ಸಂಭ್ರಮ, ಸಾಧಕರಿಗೆ ಸನ್ಮಾನ, ಕವಿಗೋಷ್ಠಿ



ಗುಂಡ್ಲುಪೇಟೆ: ಪಟ್ಟಣದ ಗುರುಭವನದಲ್ಲಿ ಕುವೆಂಪು ಕನ್ನಡ ಸಾಹಿತ್ಯ ವೇದಿಕೆ ವತಿಯಿಂದ ಬಸವ ಸಂಭ್ರಮ, ಸಾಧಕರಿಗೆ ಸನ್ಮಾನ , ಕವಿಗೋಷ್ಠಿ ಹಾಗೂ 2ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾನವ ಬಂಧುತ್ವ ವೇದಿಕೆಯ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ರವರು ಕುವೆಂಪು ಮತ್ತು ಬಸವಣ್ಣನವರ ವಿಚಾರಗಳು ಇಂದಿಗೂ ಅಸ್ತಿತ್ವದಲ್ಲಿರುವ ಸಾಮಾಜಿಕ ಪಿಡುಗುಗಳಾದ ಜಾತೀಯತೆ,ಮೇಲು–ಕೀಳು, ಅಸಮಾನತೆಯನ್ನು ತೊಡೆದುಹಾಕಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ನಂತರ ಡಾ ರತ್ನಮ್ಮ ಮಾತನಾಡುತ್ತಾ ಇಂದಿಗೂ ಹಳ್ಳಿಗಳಲ್ಲಿ ಜಾತೀಯ ಹೆಸರಿನಲ್ಲಿ ಮರ್ಯಾದೆ ಹತ್ಯೆ ನಡೆಯುತ್ತಿದೆ.ಆದರೇ ನಾವು ಮರ್ಯಾದೆ ಹೆಸರಿನಲ್ಲಿ ನಮ್ಮ ಮನೆಯ ಮಕ್ಕಳನ್ನೇ ಕೊಲ್ಲುವಷ್ಟು ಕ್ರೂರ ಮನಸ್ಥಿತಿಗೆ ಬಂದಿರುವುದು ಆಘಾತಕಾರಿ ವಿಚಾರ ಎಂದರು.

ನಂತರ ಮಾತನಾಡಿದ ದಲಿತ ಸಾಹಿತ್ಯ ಪರಿಷತ್ತು (ರಿ) ತಾಲ್ಲೂಕು ಘಟಕದ ಅಧ್ಯಕ್ಷ ಯೋಗೇಶ ಕೆ. ರವರು 12 ನೇ ಶತಮಾನದದಲ್ಲಿ ಕನ್ನಡ ಸಾಹಿತ್ಯಕ್ಕೆ ಹಾಗೂ ಸಮಾಜ ಸುಧಾರಣೆಗೆ ಮಹತ್ವ ಕೊಟ್ಟ ಅಗ್ರಗಣ್ಯರಲ್ಲಿ ಬಸವಣ್ಣನವರು ಮೊದಲಿಗರು.ಬಸವಣ್ಣನವರ ವಚನಗಳು ಸರಳ ಭಾಷೆಯಿಂದ ಕೂಡಿದ್ದು ಜನ ಸಾಮಾನ್ಯರ ನೋವು ನಲಿವುಗಳಿಗೆ ಸ್ಪಂದಿಸುವಂತೆ ಇತ್ತು.ಬಸವಣ್ಣನವರ ವಚನಗಳು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಮೂಢನಂಬಿಕೆ, ಜಾತೀಯತೆ, ಅಸ್ಪೃಶ್ಯತೆಯ ವಿರುದ್ಧ ಕ್ರಾಂತಿಯನ್ನೇ ಸಾರಿದವು.12 ನೇ ಶತಮಾನದಲ್ಲಿ ಹುಟ್ಟಿನಿಂದ ಬ್ರಾಹ್ಮಣರಾಗಿ ಸಂಸ್ಕಾರದಿಂದ ಶರಣರಾದ ಮಧುರಸನ ಮಗಳನ್ನು ಹುಟ್ಟಿನಿಂದ ಸಮಗಾರನಾದ ಹರಳಯ್ಯನ ಮಗನಿಗೆ ಕೊಟ್ಟು ಬವವಣ್ಣನವರು ವಿವಾಹ ಮಾಡಿಸುತ್ತಾರೆ.ಈ ಕಾರಣದಿಂದ ಕುಪಿತಗೊಂಡ ಸಂಪ್ರದಾಯವಾದಿಗಳು ಬಸವಣ್ಣನವರನ್ನು ಗಡೀಪಾರು ಮಾಡಿಸುತ್ತಾರೆ ಎಂದು ತಿಳಿಸಿದರು.ಆ ಕಾಲದಲ್ಲೇ ಕ್ರಾಂತಿ ಕಾರಿ ಹೆಜ್ಜೆ ಇಟ್ಟರುವ ನಮ್ಮ ಬಸವಣ್ಣನವರು ಎಂದು ಹೇಳುತ್ತಾ ಕುವೆಂಪು, ಬಸವಣ್ಣ , ಕನಕದಾಸ, ವಾಲ್ಮೀಕಿ ಹಾಗೂ ಅಂಬೇಡ್ಕರ್ ರವರ ವಿಚಾರಧಾರೆಗಳು ಮಾದರಿಯಾಗಬೇಕು ಎಂದು ತಿಳಿಸಿದರು . ಈ ಸಂದರ್ಭದಲ್ಲಿ , ಕುವೆಂಪು ಕನ್ನಡ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಬ್ರಹ್ಮಾನಂದ, ಡಾ.ಲಕ್ಷ್ಮೀ ಪ್ರೇಮಕುಮಾರ್, ಪತ್ರಕರ್ತ ಗವಿಸ್ವಾಮಿ., ರೈತ ಸಂಘದ ಅಧ್ಯಕ್ಷ ನಾಗಪ್ಪ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್.ಡಿ.ಉಲ್ಲಾಸ್, ವೆಂಕಟಯ್ಯ ಬಾಚಹಳ್ಳಿ,ಪಿ.ವಾಸು ಕಿಲಗೆರೆ, ಸಂತೋಷ್ ಮೂಖಹಳ್ಳಿ ಇದ್ದರು.

## ಮರಿಗಳ ಜೊತೆ ತಾಯಿ ಹುಲಿ ದರ್ಶನ



ಗುಂಡ್ಲುಪೇಟೆ: ಬಂಡೀಪುರ ಅಭಯಾರಣ್ಯದಲ್ಲಿ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಎರಡು ಮರಿ ಹುಲಿಗಳ ಜೊತೆ ತಾಯಿ ಹುಲಿ ದರ್ಶನ ನೀಡಿದೆ.

ತಾಯಿ ಜೊತೆಗಿದ್ದ ಎರಡು ಮರಿ ಹುಲಿಗಳನ್ನು ಕಂಡು ಪ್ರವಾಸಿಗರು ಸಂತಸ ಗೊಂಡಿದ್ದಾರೆ. ಬಂಡೀಪುರ ಅರಣ್ಯದ ಮೂರ್ಕೆರೆ ಸಮೀಪ ತಾಯಿ ಹುಲಿ ತನ್ನ ಮರಿಗ ಳೊಂದಿಗೆ ಕಾಣಿಸಿಕೊಂಡಿದ್ದು ಪ್ರವಾಸಿಗರು ಮೊಬೈಲ್‌ಗಳಲ್ಲಿ ಹುಲಿಗಳನ್ನು ಸೆರೆ ಹಿಡಿದಿದ್ದಾರೆ.

ಅರಣ್ಯದ ಗೇಮ್ ರಸ್ತೆಯಲ್ಲಿ ಕಾಣಿಸಿಕೊಂಡಿರುವ ಹುಲಿಗಳು ರಸ್ತೆ ಮಧ್ಯೆದಲ್ಲಿಯೇ ಇರುವ ಗುಂಡಿಯಲ್ಲಿದ್ದ ನೀರನ್ನು ಕುಡಿಯುವ ದೃಶ್ಯವನ್ನು ಪ್ರವಾಸಿಗರು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಬಂಡೀಪುರ ಸಫಾರಿಯಲ್ಲಿ ಹುಲಿಗಳು ಹೆಚ್ಚಾಗಿ ಕಾಣಿ ಸಿಕೊಳ್ಳುತ್ತಿದ್ದು. ವಾರಾಂತ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂಡೀಪುರಕ್ಕೆ ಆಗಮಿಸುತ್ತಿದ್ದು ಸಫಾರಿಗೆ ತೆರಳಿ ಪ್ರಾಣಿಗಳು, ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿ ಕೊಳ್ಳುತ್ತಿದ್ದಾರೆ.

**ಭಕ್ತಿಭಾವದ ಉತ್ಸವ ಮೆರವಣಿಗೆ**

## ಶಂಕರಪುರ ರಾಮಮಂದಿರದಲ್ಲಿ ಸೀತಾ ಕಲ್ಯಾಣ



ಚಾಮರಾಜನಗರ:ನಗರದ ಶಂಕರಪುರ ಬಡಾವಣೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಸೀತಾ ಕಲ್ಯಾಣ ಮಹೋತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಈ ಅಂಗವಾಗಿ ಬೆಳಿಗ್ಗೆಯಿಂದಲೇ ಮಂದಿರದಲ್ಲಿ ವಿಶೇಷ ಪೂಜೆಗಳು ನೆರವೇರಿದವು. ರಾಮ–ಸೀತೆಯ ದಿವ್ಯ ಮೂರ್ತಿಗಳನ್ನು ವೈವಿಧ್ಯಮಯ ಪುಷ್ಪಗಳಿಂದ ಅಲಂಕರಿಸಲಾಗಿದ್ದು, ಅಭಿಷೇಕ ಹಾಗೂ ಹೋಮ ಹವನಗಳ ಮೂಲಕ ಧಾರ್ಮಿಕ ವಿಧಿವಿಧಾನಗಳು ನಡೆಯಿತು. ವೇದಘೋಷಗಳ ನಡುವೆ ನಡೆದ ಪೂಜಾ ಕಾರ್ಯಕ್ರಮಗಳು ಭಕ್ತರಲ್ಲಿ ಆಧ್ಯಾತ್ಮಿಕ ವಾತಾವರಣವನ್ನು ಸೃಷ್ಟಿಸಿತು. ಸಂಜೆ ಸುಮಾರು 7:30ರ ವೇಳೆ ಉತ್ಸವ ಮೆರವಣಿಗೆ ವೈಭವದಿಂದ ನಡೆಯಿತು. ಶ್ರೀರಾಮ ಮಂದಿರದಿಂದ ಆರಂಭವಾದ ಮೆರವಣಿಗೆ ಶಂಕರಪುರ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆಯಲ್ಲಿ ವಿಪ್ರ ಮಹಿಳೆಯರು ರಾಮನಾಮ ಜಪ ಹಾಗೂ ಭಕ್ತಿಗೀತೆಗಳನ್ನು ಗಾಯನ ಮಾಡುವ ಮೂಲಕ ಭಕ್ತಿ ಪರವಶತೆಯನ್ನು ಹೆಚ್ಚಿಸಿದರು.

ಉತ್ಸವ ಸಮಿತಿ ಸದಸ್ಯರ ನೇತೃತ್ವದಲ್ಲಿ ಮೆರವಣಿಗೆ ಶಿಸ್ತಿನಿಂದ ಸಾಗಿದ್ದು, ಭಕ್ತರು ಹೂವುಗಳ ಮಳೆಗೈದು, ದೀಪಗಳನ್ನು ಬೆಳಗಿಸಿ ಉತ್ಸವಕ್ಕೆ ಮತ್ತಷ್ಟು ವೈಭವ ನೀಡಿದರು. ಸ್ಥಳೀಯ ನಿವಾಸಿಗಳು ತಮ್ಮ ಮನೆಗಳ ಮುಂದೆ ರಂಗೋಲಿ ಹಾಕಿ, ದೀಪಾಲಂಕಾರ ಮಾಡಿ ಉತ್ಸವಕ್ಕೆ ಸ್ವಾಗತ ಕೋರಿದರು.

ಮೆರವಣಿಗೆ ಸಮಾಪ್ತಿಯಾದ ನಂತರ ಮಂದಿರದಲ್ಲಿ ಮಹಾಮಂಗಳಾರತಿ ನೆರವೇರಿಸಿ, ಎಲ್ಲ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯರು, ಸಾರ್ವಜನಿಕರು, ವಿಪ್ರಬಾಂಧವರು ಹಾಗೂ ಉತ್ಸವದ ಪ್ರಮುಖರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸೀತಾ ಕಲ್ಯಾಣ ಮಹೋತ್ಸವದ ಮೂಲಕ ಶಂಕರಪುರ ಬಡಾವಣೆಯಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೌಹಾರ್ದತೆಯ ಸೊಬಗು ಮತ್ತಷ್ಟು ಹೆಚ್ಚಿದಂತಾಯಿತು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಿ

# ಮಹಿಳಾ ಸಬಲೀಕರಣ, ಸಮಾನತೆಗಾಗಿ ವಿವಿಧ ಕಾರ್ಯಕ್ರಮಗಳು ಕೆ.ಆರ್. ನಂದಿನಿ



**ಮಂಡ್ಯ:** ಜಿಲ್ಲೆಯಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಾಧನೆಗಳನ್ನು ಗುರುತಿಸುವ ಉದ್ದೇಶದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್.ನಂದಿನಿ ತಿಳಿಸಿದರು.

ಅವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–2026ರ ಪೂರ್ವಭಾವಿ ಸಭೆಯನ್ನು ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ವಿಡಿಯೋ ಸಂವಾದದ ಮೂಲಕ ನಡೆಸಿ ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಆಶಾ ಕಾರ್ಯಕರ್ತರು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಭಾಗವಹಿಸುವಂತೆ ಸೂಚಿಸಿದರು. ಗಣ್ಯರಿಗೆ ಆಹ್ವಾನ ಪತ್ರಿಕೆಗಳನ್ನು ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಜಿಲ್ಲಾ ಮಟ್ಟದಲ್ಲಿ ಕ್ರೀಡಾಕೂಟ, ಕ್ವಿಜ್, ಚರ್ಚೆ, ಅಶುಭಾಷಣ ಹಾಗೂ ಚಿತ್ರಕಲೆ ಸ್ಪರ್ಧೆಗಳನ್ನು ಆಯೋಜಿಸುವಂತೆ ಸೂಚಿಸಿದರು. ವಿಜೇತರಿಗೆ ಕಾರ್ಯಕ್ರಮದ ದಿನವೇ ಬಹುಮಾನ ಮತ್ತು ಪ್ರಮಾಣಪತ್ರ ವಿತರಣೆ ಮಾಡಲಾಗುವುದು ಎಂದರು.

ಅದೇ ರೀತಿ ಡಾ. ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ 15 ಮಳಿಗೆಗಳ ಮೂಲಕ ವಸ್ತು ಪ್ರದರ್ಶನ ಏರ್ಪಡಿಸಲಾಗುವುದು.

ಮಹಿಳಾ ಫಲಾನುಭವಿಗಳಿಗೆ ಸ್ವಾವಲಂಬಿ ಸಾರಥಿ ಯೋಜನೆಯಡಿ ವಾಹನ ವಿತರಣೆ ಸೇರಿದಂತೆ ವಿವಿಧ ಸವಲತ್ತುಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ನೈರುತ್ಯ ರೈಲ್ವೆ ಮೈಸೂರು ವಿಭಾಗದ ಸಾಧನೆ



**ಮೈಸೂರು:** 2025–26ನೇ ಹಣಕಾಸು ವರ್ಷದಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗ ಸಮಗ್ರ ಬೆಳವಣಿಗೆ ಕಂಡಿದ್ದು, ಕಾರ್ಯಾಚರಣೆ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರೆಂ) ಮುದಿತ್ ಮಿತ್ತಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಭಾಗ 449.13 ಕೋಟಿ ಪ್ರಯಾಣಿಕ ಆದಾಯ ಗಳಿಸಿ ಶೇ.1.49ರಷ್ಟು ಬೆಳವಣಿಗೆ ಕಂಡಿದೆ. ಕಳೆದ ಸಾಲಿನಲ್ಲಿ 419.89 ಕೋಟಿ ವರಮಾನ ಬಂದಿತ್ತು. ಟಿಕೆಟ್ ಪರಿಶೀಲನೆ ಕಾರ್ಯಕ್ಷಮತೆ ಅತ್ಯುತ್ತಮವಾಗಿ ಮುಂದುವರಿದಿದ್ದು, ಇದರಿಂದ 9.75 ಕೋಟಿ ಆದಾಯ ದೊರೆತಿದೆ ಎಂದು ಮಾಹಿತಿ ನೀಡಿದರು.

ವಾಣಿಜ್ಯ ಜಾಹೀರಾತು ಮೂಲದಿಂದ ದಾಖಲೆಯ 3.17 ಕೋಟಿ, ಪಾರ್ಕಿಂಗ್‌ನಿಂದ 4.02 ಕೋಟಿ, ಕೇಟರಿಂಗ್‌ನಿಂದ 2.61 ಕೋಟಿ ಆದಾಯ ಬಂದಿದೆ. ಪಾರ್ಸೆಲ್ ಆದಾಯ 11.81 ಕೋಟಿಗೆ ತಲುಪಿದ್ದು, ಎಸ್‌ಎಲ್‌ಆರ್ ಹಾಗೂ ವಿಪಿಎಚ್ ಮೂಲಕ ಪಾರ್ಸೆಲ್ ವರಮಾನ 5.85 ಕೋಟಿ ಸಂಗ್ರಹವಾಗಿದೆ ಎಂದು ಹೇಳಿದರು.

2ನೇ ಅತ್ಯುನ್ನತ ಸಾಧನೆ: ಸರಕು ಸಾಗಣೆ ವಿಭಾಗದಲ್ಲೂ ಉತ್ತಮ ಸಾಧನೆಯಾಗಿದ್ದು, 900.19 ಕೋಟಿ ಆದಾಯ ಬಂದಿದೆ. ಇದು ರೈಲ್ವೆ ವಿಭಾಗದ 2ನೇ ಅತ್ಯುನ್ನತ ಸಾಧನೆಯಾಗಿದೆ. 10.586 ಮಿಲಿಯನ್ ಟನ್ ಸರಕು ಸಾಗಿಸಿದ್ದು, ಇದರಲ್ಲಿ 8.664 ಮಿಲಿಯನ್ ಟನ್ ಉಕ್ಕು ಸೇರಿದೆ. ಇದು ವಿಭಾಗದ ಇತಿಹಾಸದಲ್ಲಿ 2ನೇ ಹೆಚ್ಚಿನ ಲೋಡ್ ಆಗಿದೆ. 116 ಎನ್‌ಎಂಜಿ ರೇಕ್ (90 ದ್ವಿಚಕ್ರವಾಹನ, 26 ನಾಲ್ಕುಚಕ್ರದ ವಾಹನಗಳು)ಗಳ ಲೋಡಿಂಗ್‌ನಿಂದ 23.94 ಕೋಟಿ ಆದಾಯ ಬಂದಿದೆ ಎಂದು ತಿಳಿಸಿದರು.

71 ರೈಲುಗಳ ವೇಗ ಹೆಚ್ಚಿಸಲಾಗಿದ್ದು (ಗಂಟೆಗೆ ಸರಾಸರಿ 110 ಕಿ.ಮೀ.), ಹೊಸದಾಗಿ 44 ರೈಲುಗಳನ್ನು ವಿದ್ಯುತ್ ಎಂಜಿನ್‌ನಿಂದ ಓಡಿಸಲಾಗುತ್ತಿದೆ. ಇದರಿಂದಾಗಿ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಕಾರಣದಿಂದ ಉಂಟಾಗಿರುವ ಡೀಸೆಲ್ ಕೊರತೆ ನಮ್ಮಲ್ಲಿ ಬಾಧಿಸದಂತೆ ಕ್ರಮ ವಹಿಸಲಾಗಿದೆ. 28 ನಿಲ್ದಾಣಗಳಲ್ಲೂ ಅಡಿಟ್ ಪೂರ್ಣಗೊಂಡಿದೆ. ಸಕಲೇಶಪುರ–ಸುಬ್ರಹ್ಮಣ್ಯ ರಸ್ತೆ ಘಾಟ್ ವಿಭಾಗದ ವಿದ್ಯುದ್ದೀಕರಣ ಕಾಮಗಾರಿ ಕೈಗೊಂಡಿರುವುದು ಮಹತ್ವದ ಸಾಧನೆಯಾಗಿದೆ ಎಂದು ಮಾಹಿತಿ ನೀಡಿದರು.

1.17 ಕೋಟಿ ಮೌಲ್ಯದ ವಸ್ತುಗಳನ್ನು ಪ್ರಯಾಣಿಕರಿಗೆ ಹಿಂತಿರುಗಿಸಲಾಗಿದೆ. 132 ಮಕ್ಕಳನ್ನು ರಕ್ಷಿಸಲಾಗಿದೆ. 88.92 ಕೋಟಿ ಆದಾಯ (ಶೇ.53.55 ಹೆಚ್ಚಳ) ಸಾಧಿಸಲಾಗಿದೆ. ಕ್ಯೂಆರ್ ಕೋಡ್ ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆ ಪರಿಚಯಿಸಲಾಗಿದೆ. ಮೂಲಸೌಲಭ್ಯಗಳ ವೃದ್ಧಿಗೆ ಮತ್ತು ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಟಿಕೆಟ್ ಬುಕಿಂಗ್ ಕೇಂದ್ರದಲ್ಲಿ ನಾನ್ ರೈಲ್ ಹೆಡ್ ಪಿಆರೆಸ್ ಸೌಲಭ್ಯ ಪ್ರಾರಂಭಿಸಲಾಗಿದೆ. ಇದರಿಂದ ನಗದು ರಹಿತ, ಸುಗಮ ಟಿಕೆಟ್ ಬುಕಿಂಗ್ ಮಾಡಬಹುದಾಗಿದೆ ಎಂದು ಹೇಳಿದರು.

ವಂದೇ ಭಾರತ್ ರೈಲು ಡಿಪೊ: ಮೈಸೂರಿನಲ್ಲಿ ವಂದೇ ಭಾರತ್ ಡಿಪೊ ನಿರ್ಮಾಣಕ್ಕೆ ಯೋಜಿಸಲಾಗಿದ್ದು, ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅಂದಾಜು 400 ಕೋಟಿ ಬೇಕಾಗಲಿದೆ. ಇದಕ್ಕೆ ಅನುಮತಿ ಸಿಕ್ಕಲ್ಲಿ ವಂದೇ ಭಾರತ್ ರೈಲುಗಳ ನಿರ್ವಹಣೆ ಇಲ್ಲಿಯೇ ನಡೆಯಲಿದೆ. ಇಲ್ಲಿಂದ ಹೆಚ್ಚಿನ ಸಂಖ್ಯೆಯ ವಂದೇ ಭಾರತ್ ರೈಲುಗಳ ಕಾರ್ಯಾಚರಣೆಯೂ ಸಾಧ್ಯವಾಗಲಿದೆ ಎಂದು ಮುದಿತ್ ಮಿತ್ತಲ್ ತಿಳಿಸಿದರು. ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ಇದ್ದರು.

# ಇಂದು ಬಾಬು ಜಗಜೀವನ್ ರಾಂ ರವರ 119ನೇ ಜನ್ಮದಿನಾಚರಣೆ



**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜಕಲ್ಯಾಣ ಇಲಾಖೆ, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಂ ರವರ 119ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಏಪ್ರಿಲ್ 05 ರಂದು ಬೆಳಿಗ್ಗೆ 10.00 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದ ಉದ್ಯಾನವನದಲ್ಲಿರುವ ಡಾ. ಬಾಬು ಜಗಜೀವನ್ ರಾಂ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11 ಗಂಟೆಗೆ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ಕರ್ನಾಟಕ ರಾಜ್ಯ ಪರಿಷ್ತ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರು ಡಾ. ಮೂರ್ತಿ ರವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.


ಮಂಡ್ಯ ವಿಧಾನಸಭಾ ಶಾಸಕರಾದ ಪಿ.ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ,ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್.ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಪಿ ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಿ. ನಾಗೇಂದ್ರ ಕುಮಾರ್ ರವರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮನೋಜ್ ಕುಮಾರ್ ಮೀನಾ ರವರು ಆಗಮಿಸಲಿದ್ದಾರೆ.

ಮಂಡ್ಯ ವಿಶ್ವವಿದ್ಯಾಲಯ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರು ಮಂಜು ರವರು ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದಾರೆ.

# ಪ್ರೀತಿ ನೆಪದಲ್ಲಿ ಚಿನ್ನ ಕದ್ದ ಆರೋಪಿ ಬಂಧನ



**ಮಂಡ್ಯ:** ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುವುದಾಗಿ ನಂಬಿಸಿ ಮನೆಯಲ್ಲಿದ್ದ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಫೆಬ್ರವರಿ 21, 2026ರಂದು ಹೊಂಬಾಳೇಗೌಡನದೊಡ್ಡಿ ಗ್ರಾಮದ ರಾಜಣ್ಣ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು. ಅಪ್ರಾಪ್ತೆಯನ್ನು ಪುಸಲಾಯಿಸಿ ಮನೆಯಲ್ಲಿದ್ದ ಚಿನ್ನದ ಓಲೆ, ಚೈನ್, ಉಂಗುರ ಸೇರಿದಂತೆ ಒಟ್ಟು 40.24 ಗ್ರಾಂ ಚಿನ್ನವನ್ನು ಕಳ್ಳತನ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಪ್ರಕರಣದ ತನಿಖೆಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ. ಶೋಭಾರಾಣಿ ಅವರ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಿ ಕೈಗೊಳ್ಳಲಾಗಿತ್ತು.

ಪೊಲೀಸರು ಕಾರ್ಯಾಚರಣೆ ನಡೆಸಿ ಸ್ವರ್ಣಸಂದ್ರ ನಿವಾಸಿ ರಜತ್ ಮೂರ್ತಿ (23) ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಪ್ರಕರಣದಲ್ಲಿ ಕಳ್ಳತನವಾಗಿದ್ದ ಎಲ್ಲಾ ಚಿನ್ನದ ಒಡವೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ನಡೆಸಿದ ಪೊಲೀಸರನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಅಭಿನಂದಿಸಿದ್ದಾರೆ.

# ಏ.9ರಂದು ಬಿ.ರಾಮಕೃಷ್ಣ ಪ್ರಶಸ್ತಿ ಪ್ರದಾನ ಸಮಾರಂಭ



**ಮಂಡ್ಯ:** ಕರ್ನಾಟಕ ಸಂಘ ಮತ್ತು ಆರ್.ಕೆ.ಸಮೂಹ ಶಿಕ್ಷಣ ಸಂಸ್ಥೆ ಸಹಯೋಗದೊಂದಿಗೆ ಬಿ.ರಾಮಕೃಷ್ಣ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏ.9ರಂದು ಬೆಳಗ್ಗೆ 11 ಗಂಟೆಗೆ ಮದ್ದೂರು ತಾಲೂಕಿನ ಕೆ.ಹೊನ್ನಲಗೆರೆ ಗ್ರಾಮದ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಡಾ.ಜಯಪ್ರಕಾಶಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿ.ರಾಮಕೃಷ್ಣ ಪ್ರಶಸ್ತಿಗೆ ತುಮಕೂರಿನ ಜಾನಪದ ವಿದ್ವಾಂಸ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಹಾಗೂ ಕೊತ್ತತ್ತಿ ಗ್ರಾಮದ ವಿದ್ಯಾಗಣಪತಿ ಶಿಕ್ಷಣ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ ಎಂದರು.

ಕಾರ್ಯಕ್ರಮವನ್ನು ಮಾಜಿ ಶಾಸಕ ಎಂ.ಶ್ರೀನಿವಾಸ್ ಉದ್ಘಾಟಿಸುವರು. ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶಗೌಡ ಅಧ್ಯಕ್ಷತೆ ವಹಿಸುವರು, ಅರಕಲಗೂಡಿನ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಪ್ರಶಸ್ತಿ ಪ್ರದಾನ ಮಾಡುವರು, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಶುಭ ಹಾರೈಸುವರು, ವಿಶ್ರಾಂತ ಪ್ರಾಂಶುಪಾಲ ಡಾ.ಎಸ್.ಬಿ.ಶಂಕರಗೌಡ ಅಭಿನಂದನಾ ನುಡಿಗಳನ್ನಾಡುವರು. ವಿಧಾನ ಪರಿಷತ್ ಮಾಜಿ ಸದಸ್ಯ ಬಿ..ರಾಮಕೃಷ್ಣ, ಪಿ.ಚಂದ್ರಕಲಾ ರಾಮಕೃಷ್ಣ ಗೌರವ ಉಪಸ್ಥಿತಿ ವಹಿಸುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಶಿಕ್ಷಣ ಸಂಸ್ಥೆಯ ಆಳಿತಾಧಿಕಾರಿ ಎಂ.ಎಸ್. ಮರಿಸ್ವಾಮಿಗೌಡ, ಪ್ರಾಂಶುಪಾಲ ಡಾ.ಎಂ.ಸಿ.ಸತೀಶ್‌ಬಾಬು, ಸಂಘದ ನಿರ್ದೇಶಕ ಎಚ್.ಬಿ.ನಾಗಪ್ಪ ಇದ್ದರು.

## ಶಿವಶರಣಪ್ಪ ವಾಲಿ ಸೇರಿ 9 ಮಂದಿಗೆ

# ಕೆಯುಡಬ್ಲ್ಯೂಜೆ ಗೌರವ



**ಬೆಂಗಳೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಸಂದರ್ಭದಲ್ಲಿ ಆತಿಥ್ಯ ವಹಿಸಿರುವ ಬೀದರ್ ಜಿಲ್ಲೆಯ ಹಿರಿಯ ಪತ್ರಕರ್ತರು ಮತ್ತು ಎಲ್ಲಾ ಮಾಜಿ ಅಧ್ಯಕ್ಷರುಗಳಿಗೂ ಕೆಯುಡಬ್ಲ್ಯೂಜೆ ಪ್ರಶಸ್ತಿ ಘೋಷಣೆ ಮಾಡಲಾಗಿದೆ.

ತೊಂಬತ್ತನಾಲ್ಕು ವಸಂತಗಳನ್ನು ಕಂಡಿರುವ ಮತ್ತು ಪತ್ರಿಕೋದ್ಯಮದಲ್ಲಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿರುವ ಉತ್ತರ ಕರ್ನಾಟಕ ಪತ್ರಿಕೆಯ ಪ್ರಧಾನ ಸಂಪಾದಕರಾದ ಶಿವಶರಣಪ್ಪ ವಾಲಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿ ಸಂಘಕ್ಕೆ ಅಡಿಪಾಯ ಹಾಕಿ ಕಟ್ಟಿ ಬೆಳೆಸಿದವರಲ್ಲಿ ಪಬ್ಲಿಕ್ ಸಂಪಾದಕರಾದ ಗಂಧರ್ವ ಸೇನಾ ಕೂಡ ಒಬ್ಬರು. ಹಾಗೆಯೇ ಸಂಘವನ್ನು ಮುನ್ನೆಡೆಸಿಕೊಂಡು ಬಂದಿರುವ ಈ ಕೆಳಕಂಡ ಅಧ್ಯಕ್ಷರುಗಳನ್ನು ಇದೇ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಪರಿಹಾರ ಸಂಪಾದಕರಾದ ಮಲ್ಲಿಕಾರ್ಜುನ ಬಿರಾದಾರ್, ವಚನ ಕ್ರಾಂತಿ ಸಂಪಾದಕ ಬಾಬು ವಾಲಿ, ಬೀದರ್ ಸಂಪರ್ಕ ಸಂಪಾದಕರಾದ ಬಸವರಾಜ ಕಾಮಶೆಟ್ಟಿ, ದಮನ್ ಹಿಂದಿ ಡೈಲಿ ಸಂಪಾದಕ ಸಿದ್ದರಾಮಯ್ಯ ಸ್ವಾಮಿ, ಸಂಜೆ ಅಂತರಂಗ ಸಂಪಾದಕರಾದ ಮಾಳಪ್ಪ ಅಡಸಾರೆ, ಅಶೋಕ ಕೋಟೆ ಸಂಪಾದಕರಾದ ಅಶೋಕ ಕುಮಾರ್ ಕಾರಂಜಿ, ಬೀದರ್ ರಹಸ್ಯ ಕೋಟೆ ಸಂಪಾದಕರಾದ ಡಿ.ಕೆ. ಗಣಪತಿ ಅವರನ್ನು ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

# ಶಶಿಕುಮಾರ್ ಹುಟ್ಟುಹಬ್ಬ ಆಚರಣೆ



**ಮಂಡ್ಯ:** ಸಮಾಜ ಸೇವಕ ಶಶಿಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ನಗರದಲ್ಲಿ ಆಯೋಜಿಸಲಾಗಿತ್ತು.

ಮೊದಲಿಗೆ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು. ನಂತರ ಹೊಂಬಾಳೆ ಎಜುಕೇಷನ್ ಟ್ರಸ್ಟ್ ಆವರಣದಲ್ಲಿ ವಿವಿಧ ಸಸಿಗಳನ್ನು ನೆಡಲಾಯಿತು. ಜಿಲ್ಲಾಸ್ಪತ್ರೆಯಲ್ಲಿ ಹಣ್ಣು ಹಂಪಲು ವಿತರಿಸಲಾಯಿತು. ಸೇವಾಕಿರಣ ವೃದ್ಧಾಶ್ರಮದಲ್ಲಿ ಹಿರಿಯ ನಾಗರಿಕರಿಗೆ ಬೆಡ್‌ಶೀಟ್ ವಿತರಿಸಲಾಯಿತು.

ನಗರದ ಮಿಮ್ಸ್ ಆವರಣದಲ್ಲಿ ಮಮತೆಯ ಮಡಿಲು ಅನ್ನದಾ ಸೋಹದಲ್ಲಿ ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಅನ್ನದಾನ ನಡೆಸಲಾಯಿತು. ನಗರದ ಹೊರವಲಯದ ಅಮರಾವತಿ ಹೋಟೆಲ್‌ನಲ್ಲಿ ಅಭಿಮಾನಿಗಳು, ಮುಖಂಡರಿಗೆ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಮಾಜಿ ಸಂಸದೆ ಸುಮಲತಾ ಅಂಬರೀಷ್, ಮಾಜಿ ಸಚಿವ ರಾದ ಸಿ.ಎಸ್.ಪುಟ್ಟರಾಜು, ಸಿ.ಪಿ.ಯೋಗೇ ಶ್ವರ್, ಮುಖಂಡರಾದ ಬಿ.ಆರ್.ರಾಮ ಚಂದ್ರು, ಬೇಲೂರು ಸೋಮಶೇಖರ್, ಬಸವರಾಜು, ದಿನೇಶ್, ಅರವಿಂದ್, ಕವಿತಾ, ಲಾವಣ್ಯ ಅವರು ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಮುಖಂಡರು ಹಾಗೂ ಸಂಸ್ಥೆಯವರು ಶಶಿಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದರು.

## ವಿದ್ಯುತ್ ವ್ಯತ್ಯಯ

**ಮಂಡ್ಯ:** 66/11 ಕೆ.ವಿ ಕೋಲ್ಕರನದೊಡ್ಡಿ. ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್–07 ಪುರ ಫೀಡರ್ ಮರ?ಗದಲ್ಲಿ ಲಿಂಕ್‌ಲೈನ್ ಹಮ್ಮಿಕೊಂಡಿರುವುದರಿಂದ ಏಪ್ರಿಲ್ 06 ರಂದು ಬೆಳಿಗ್ಗೆ 09–00 ರಿಂದ ಸಂಜೆ 6–00 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕೋಲ್ಕರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದ ಪುರ ಫೀಡರ್‌ನ ಪ್ರದೇಶಗಳಾದ ಟಿ ಮಲ್ಲಿಗೇರೆ, ತಗ್ಗಹಳ್ಳಿ, ಹಳುವಾಡಿ, ಪುರ, ಮರಸಿಂಗನಹಳ್ಳಿ, ತಿಮ್ಮನಹೊಸುರು, ಲೋಕಸರ ಹಾಗೂ ಈ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕೊತ್ತತ್ತಿ ಉಪ ವಿಭಾಗದ ಸಹಾಯಕ ಕರ?ಯನರ?ವಾಹಕ ಇಂಜಿನಿಯರ್ ಆರ್.ಟಿ ಚಂದ್ರಮೌಳಿ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಅಕ್ರಮ ಶೆಡ್ಡುಗಳನ್ನು ತೆರವುಗೊಳಿಸುವಂತೆ ಗ್ರಾಮಸ್ಥರ ಆಗ್ರಹ



**ಕೆ.ಆರ್.ಪೇಟೆ:** ಹರಿಹರಪುರ ಗ್ರಾಮ ಪಂಚಾಯತಿಗೆ ಸೇರಿದ ಸರ್ವೆ ನಂ 24 ರ ಜಾಗದಲ್ಲಿ ಗ್ರಾಮದ ಬಲಾಢ್ಯರು ನಿರ್ಮಿಸಿರುವ ಅಕ್ರಮ ಶೆಡ್ ಗಳನ್ನು ತಕ್ಷಣವೇ ತೆರವುಗೊಳಿಸಿ ನಿವೇಶನ ರಹಿತ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಇತರೆ ಸಮುದಾಯಗಳ ಕಡು ಬಡವರಿಗೆ ಹಂಚಿಕೆ ಮಾಡುವಂತೆ ಆಗ್ರಹಿಸಿ ಡಾ.ಬಿ.ಆರ್. ಅಂಬೇಡ್ಕರ್ ಸೇವಾ ಸಮಿತಿ, ಯುವಕರ ಸಂಘ, ಅಲ್ಪ ಸಂಖ್ಯಾತ ಜಾಮಿಯಾ ಮಸ್ಜಿದ್ ಸಂಘ ಹಾಗೂ ಹಿಂದುಳಿದ ಸಮುದಾಯದ ಮುಖಂಡರು ಹರಿಹರಪುರ ಗ್ರಾಮ ಪಂಚಾಯತಿಗೆ ಮುತ್ತಿಗೆ ಹಾಕಿ ಆಗ್ರಹಿಸಿ ಪಿ.ಡಿ.ಓ ಅವರಿಗೆ ಮನವಿ ಪತ್ರ ಅರ್ಪಿಸಿದರಲ್ಲದೆ ಏಪ್ರಿಲ್ 06 ರ ಸೋಮವಾರದ ಒಳಗೆ ಅಕ್ರಮ ಶೆಡ್ ಗಳನ್ನು ತೆರವುಗೊಳಿಸಿ ಸರ್ಕಾರಿ ಆಸ್ತಿ ಸಂರಕ್ಷಣೆ ಮಾಡದಿದ್ದರೆ ಏಪ್ರಿಲ್ 06 ರಿಂದ ಗ್ರಾಮ ಪಂಚಾಯತಿಯ ಮುಂದೆ ನ್ಯಾಯಕ್ಕಾಗಿ ಆಗ್ರಹಿಸಿ ಹೋರಾಟ ಆರಂಭಿಸುವುದಾಗಿ ಎಚ್ಚರಿಸಿದರು.

ಸರ್ವೆ.24 ರ ಎರಡು ಎಕರೆ ಜಾಗ ಸಂಪೂರ್ಣವಾಗಿ ಗ್ರಾಮ ಪಂಚಾಯತಿಯ ಸೊತ್ತು. ಇದರ ಸಂರಕ್ಷಣೆ ಗ್ರಾಮ ಪಂಚಾಯತಿಯ ಜವಾಬ್ದಾರಿ. ಆದರೆ ಗ್ರಾಮ ಪಂಚಾಯತಿ ರಾತ್ರೋರಾತ್ರಿ ಬಲಾಢ್ಯರು ಅಕ್ರಮ ಶೆಡ್ ನಿರ್ಮಾಣ ಮಾಡಿಕೊಂಡಿದ್ದರೂ ಯಾವುದೇ ಕ್ರಮ ವಹಿಸದೆ ನಿರ್ಲಕ್ಷ್ಯ ತೋರಿಸಿರುವುದು ಖಂಡನೀಯ.

ಏಪ್ರಿಲ್ 06 ರ ಒಳಗೆ ಅಕ್ರಮ ಶೆಡ್ಡುಗಳನ್ನು ತೆರವುಗೊಳಿಸಿ ಗ್ರಾಮ ಪಂಚಾಯತಿಯ ವಶಕ್ಕೆ ತೆಗೆದುಕೊಳ್ಳದಿದ್ದರೆ ಸೋಮುವಾರದಿಂದ ಬೃಹತ್ ಹೋರಾಟ ಆರಂಭಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರಲ್ಲದೆ ಅನಂತರ ನಿಯೋಗದ ಮೂಲಕ ಕೆ.ಆರ್.ಪೇಟೆ ಪಟ್ಟಣಕ್ಕೆ ಆಗಮಿಸಿ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಕೆ.ಸುಷ್ಮಾ ಮತ್ತು ಗ್ರೇಡ್–2 ತಹಸೀಲ್ದಾರ್ ಲೋಕೇಶ್ ಅವರಿಗೆ ಮನವಿ ಪತ್ರ ಅರ್ಪಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಮುಖಂಡರುಗಳಾದ ಹರಿಹರಪುರ ನರಸಿಂಹ, ಹೆಚ್.ಟಿ.ಅನಿಲ್ ಕುಮಾರ್, ಹೆಚ್.ಆರ್.ಪ್ರಸನ್ನ, ಹೆಚ್.ಎ.ರಾಜೇಶ, ರಾಜ, ಗ್ರಾ.ಪಂ ಮಾಜಿ ಅಧ್ಯಕ್ಷೆ ರಾಜಮ್ಮ ಮತ್ತಿತರರು ಪ್ರತಿಭಟನೆಯಲ್ಲಿದ್ದರು.

ಪಿ.ಡಿ.ಓ ಭೇಟಿ:– ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಸದಸ್ಯರ ಸಹಯೋಗದೊಂದಿಗೆ ಗ್ರಾಮಸ್ಥರು ಗ್ರಾಮ ಪಂಚಾಯತಿ ಕಛೇರಿಗೆ ಮುತ್ತಿಗೆ ಹಾಕಿ ಅಕ್ರಮ ಶೆಡ್ಡುಗಳನ್ನು ತೆರವುಗೊಳಿಸುವಂತೆ ಆಗ್ರಹಿಸಿದ ಬೆನ್ನಲ್ಲೆ ಪಿ.ಡಿ.ಓ ನಹಿದ ಅಕ್ತರ್ ಅಕ್ರಮ ಶೆಡ್ ನಿರ್ಮಾಣದ ಸ್ಥಳಕ್ಕೆ ಪೊಲೀಸರೊಂದಿಗೆ ತೆರಳಿ ಅಕ್ರಮ ಶೆಡ್ಡುಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಸೂಚಿಸಿದರು. ಆದರೆ ಅತಿಕ್ರಮಣಕಾರರು ಪಿ.ಡಿ.ಓ ಮಾತಿಗೆ ಸೊಪ್ಪು ಹಾಕದೆ ವಾಗ್ವಾದಕ್ಕಿಳಿದರು. ಗ್ರಾಮ ಪಂಚಾಯತಿ ಮಾಜಿ ಸದಸ್ಯ ಶ್ರೀಧರ್ ನೇತೃತ್ವದಲ್ಲಿ ಅಕ್ರಮ ಶೆಡ್ ತೆರವಿಗೆ ಪ್ರತಿರೋಧ ತೋರಿಸಿದ ಕೆಲವರು ಸರ್ವೆ.24 ರ ಜಾಗದಲ್ಲಿ ನಾವು ನಮ್ಮ ಪೂರ್ವಜರ ಕಾಲದಿಂದಲೂ ಹುಲ್ಲು ಮೆದೆ ಹಾಕಿಕೊಂಡು ಸ್ವಾಧೀನದಲ್ಲಿದ್ದೆವು. 2011 ರಲ್ಲಿ ತಾಲೂಕಿನ ತಹಸೀಲ್ದಾರರಾಗಿದ್ದ ಡಾ.ಹೆಚ್.ಎಲ್.ನಾಗರಾಜು ಅವರು (ಡಾ.ನಿಶ್ಚಲಾನಂದನಾಥಶ್ರೀಗಳು) ಗ್ರಾಮದ ದೇವಾಲಯಕ್ಕೆ 1 ಎಕರೆ ಜಾಗವನ್ನು ನೀಡಿ ಉಳಿದ ಜಾಗದಲ್ಲಿ ನಿವೇಶನಗಳನ್ನು ಹಂಚುವ ಉದ್ದೇಶದಿಂದ ಸರ್ಕಾರಿ ಗೋಮಾಳವನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರಿಸಿದರು. ನಿವೇಶನಗಳ ಹಂಚಿಕೆ ಸಂಬಂಧ ಗ್ರಾಮ ಪಂಚಾಯತಿಯಲ್ಲೂ ನಿರ್ಣಯ ಮಾಡಲಾಗಿದೆ. ಗ್ರಾಮ ಪಂಚಾಯತಿ ಇದುವರೆಗೂ ಯಾವುದೇ ನಿವೇಶನ ಹಂಚಿಕೆ ಮಾಡದ ಕಾರಣ ನಾವು ನಮ್ಮ ಪೂರ್ವಜರ ಅದೀನದಲ್ಲಿದ್ದ ಜಾಗದಲ್ಲಿ ಶೆಡ್ ಹಾಕಿದ್ದೇವೆ ಎಂದು ವಾದಿಸಿದರು.

ಗ್ರಾಮಸ್ಥರ ವಾದವನ್ನು ಒಪ್ಪದ ಪಿ.ಡಿ.ಓ ನಹಿದ ಅಕ್ತರ್ ಗ್ರಾಮ ಪಂಚಾಯತಿ ಜಾಗದಲ್ಲಿ ನಾಲ್ಕಾರು ಜನ ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದು ಇದಕ್ಕೆ ಸಂಬಂಧಿಸಿದಂತೆ ಪ್ರಕರಣ ಲೋಕಾಯುಕ್ತ ನ್ಯಾಯಾಲಯದಲ್ಲಿದೆ. ಲೋಕಾಯುಕ್ತರ ತನಿಖೆಯಲ್ಲಿರುವ ಕಾರಣದಿಂದ ಇಲ್ಲಿ ಯಾವುದೇ ನಿವೇಶನಗಳ ಹಂಚಿಕೆ ಮಾಡಿಲ್ಲ.

ನಿವೇಶನಗಳ ಹಂಚಿಕೆ ಮಾಡಿಲ್ಲ ಎನ್ನುವ ಕಾರಣದಿಂದ ಪಂಚಾಯತಿ ಜಾಗವನ್ನು ಅತಿಕ್ರಮಿಸುವುದು ಕಾನೂನಿಗೆ ವಿರುದ್ಧ. ಸದರಿ ಜಾಗದಲ್ಲಿ ಗ್ರಾಮ ಪಂಚಾಯತಿ ಕಟ್ಟಡ ನಿರ್ಮಾಣ, ಸಂತೇಮಾಳ ಮತ್ತಿತರ ಸಾರ್ವಜನಿಕ ಉಪಯೋಗಕ್ಕೆ ಜಾಗವನ್ನು ಕಾಯ್ದಿರಿಸಿ ಉಳಿದ ಜಾಗದಲ್ಲಿ ನಿಯಮಾನುಸಾರ, ಪರಿಶಿಷ್ಠ ಜಾತಿ/ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ಇತರ ಸಮುದಾಯಗಳ ನಿವೇಶನ ರಹಿತ ಕಡು ಬಡವರಿಗೆ ನಿವೇಶನ ಹಂಚಿಕೆ ಮಾಡಲಾಗುವುದು. ಯಾವುದೇ ವಿವಾದಗಳಿಗೂ ಅವಕಾಶ ನೀಡದೆ ಶೆಡ್ ಗಳನ್ನು ತೆರವು ಮಾಡಬೇಕು. ಇಲ್ಲದಿದ್ದರೆ ಕಾನೂನಾತ್ಮಕವಾಗಿ ತೆರವಿಗೆ ಕ್ರಮ ವಹಿಸಲಾಗುವುದು ಎಂದು ಎಚ್ಚರಿಸಿದರು.

# ಏ 6ಕ್ಕೆ ಪದಗ್ರಹಣ ಹಾಗೂ ಅಭಿನಂದನಾ ಸಮಾರಂಭ

**ಮಂಡ್ಯ:** ಜಿಲ್ಲಾ ಭುವನ ವಿಶ್ವಕರ್ಮ ಸಮಾಜದ ಕಚೇರಿ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ ಹಾಗೂ ಅಭಿನಂದನಾ ಸಮಾರಂಭವನ್ನು ಏ.6ರಂದು ಆಯೋಜಿಸಲಾಗಿದೆ ಎಂದು ಸಮಾಜದ ಕಾರ್ಯದರ್ಶಿ ಎಂ.ಎಸ್. ಕಟ್ಟೆ ಕೃಷ್ಣಸ್ವಾಮಿ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಸುಭಾಷ್ ನಗರದ 5ನೇ ಅಡ್ಡರಸ್ತೆಯಲ್ಲಿನ ಸಮಾಜದ ಕಚೇರಿಯನ್ನು ಶಾಸಕ ಪಿ.ರವಿಕುಮಾರ್‌ಗೌಡ ಉದ್ಘಾಟಿಸುವರು. ಬೆಳಗ್ಗೆ 10.30ಕ್ಕೆ ಅಂಬೇಡ್ಕರ್ ಭವನದಲ್ಲಿ ಪದಗ್ರಹಣ ಹಾಗೂ ಅಭಿನಂದನಾ ಸಮಾರಂಭ ನಡೆಯಲಿದೆ ಎಂದರು.

ವೇದಿಕೆ ಕಾರ್ಯಕ್ರಮವನ್ನು ಶಾಸಕ ಪಿ.ರವಿಕುಮಾರ್ ಗೌಡ ಉದ್ಘಾಟಿಸುವರು. ಕರ್ನಾಟನ ರಾಜ್ಯ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ ಘನ ಉಪಸ್ಥಿತಿ ವಹಿಸುವರು. ಸಮಾಜ ಜಿಲ್ಲಾಧ್ಯಕ್ಷ ಎನ್.ಬಸವರಾಜು ಅಧ್ಯಕ್ಷತೆ ವಹಿಸುವರು. ಗೌರವಾಧ್ಯಕ್ಷ ಬಿ.ವಿ.ಸೋಮು, ಉಪಾಧ್ಯಕ್ಷ ಎಂ.ಎನ್.ಅನಿಲ್‌ಕುಮಾರ್, ಖಜಾಂಚಿ ಕೆ.ಸಿ.ಶ್ರೀನಿವಾಸ್, ಸಂಘಟನಾ ಕಾರ್ಯದರ್ಶಿ ವಿ.ಸಿ.ಗೋವಿಂದರಾಜು ಹಾಗೂ ಸಂಘದ ನಿರ್ದೇಶಕರು ಭಾಗವಹಿಸಿದ್ದರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಸಮಾಜ ಜಿಲ್ಲಾಧ್ಯಕ್ಷ ಎನ್.ಬಸವರಾಜು, ಗೌರವಾಧ್ಯಕ್ಷ ಬಿ.ವಿ.ಸೋಮು, ಉಪಾಧ್ಯಕ್ಷ ಎಂ.ಎನ್.ಅನಿಲ್‌ಕುಮಾರ್, ಖಜಾಂಚಿ ಕೆ.ಸಿ.ಶ್ರೀನಿವಾಸ್, ಸಂಘಟನಾ ಕಾರ್ಯದರ್ಶಿ ವಿ.ಸಿ.ಗೋವಿಂದರಾಜು, ನಿರ್ದೇಶಕ ಕೆ.ಎಲ್.ಈರಯ್ಯ ಇದ್ದರು.



# `ನೀವು ಹೇಗಿದ್ದೀರಾ!?'



| ಸಾಕ್ಷಿ ಶ್ರೀಕಾಂತ್ ತಿಕೋಟಿಕರ ಕೊಪ್ಪಳ.

ಮನದ ಮಾತು...

ಯಾರಾದರೂ ಭೇಟಿಯಾದ ತಕ್ಷಣ ಕೇಳುವ ಮೊದಲ ಪ್ರಶ್ನೆ "ಹೇಗಿದ್ದೀರಾ?"

"ಆರಾಮ್ ಇದ್ದೇವೆ" "ಚೆನ್ನಾಗಿದ್ದೇವೆ!" ಅಂತ ಕೆಲವರು ಹೇಳಿದರೆ ಇನ್ನು ಕೆಲವರು "ದೇವರು ಇಟ್ಟ ಹಾಗೆ ಇದ್ದೇವೆ!" ಅಂತ ಉತ್ತರ ಕೊಡುತ್ತಾರೆ. ಆದರೆ ಇದು ಇಷ್ಟಕ್ಕೆ ನಿಲ್ಲದೆ ಕೆಲವರು ಕೇಳುವುದೇ ಬೇರೆ! "ಅಯ್ಯೋ ನೀವು ಎಷ್ಟು ದಪ್ಪ ಆಗಿದ್ದೀರಾ !?" "ಅಯ್ಯೋ ನೀವು ಎಷ್ಟು ಸೊರಗಿ ಹೋಗಿದ್ದೀರಾ!?" "ಅಯ್ಯೋ ನಿಮಗೆಷ್ಟು ಬಿಳಿ ಕೂದಲಾಗಿ ಬಿಟ್ಟವೆ!?" "ಮದುವೆಯಲ್ಲಿ ನೋಡಿದ್ದು ನಿನ್ನನ್ನು.. ತೆಳ್ಳಗೆ ಬೆಳ್ಳಗೆ ಇದ್ದೆ, ಈಗ ಹೇಗಾಗಿ ಬಿಟ್ಟಿದ್ದೀಯಲ್ಲ!?" (ಸದಾ ಕಾಲ ಹಾಗೇ ಇರಲು ನಾವೇನು ಶೋಕೇಸ್ ಒಳಗೆ ಇಟ್ಟ ಗೊಂಬೆಯಾ? )ನೀವು ಯಾವುದೇ ಒಂದು ಸಮಾರಂಭಕ್ಕೆ ತಯಾರಾಗಿ ಹೋದಾಗ ಅಲ್ಲಿ ಕೆಲವರ ಪ್ರಶ್ನೆಗಳು ಉಬ್ಬಿದ ಬಲೂನಿನ ಉತ್ಸಾಹಕ್ಕೆ ಸೂಜಿ ಚುಚ್ಚುವಂತಿರುತ್ತದೆ. ಅಯ್ಯೋ ಎಷ್ಟು ದಪ್ಪವಾಗಿ ಬಿಟ್ಟಿದ್ದೀರಾ... ನಿಮ್ಮ ಮಗನ ರಿಸಲ್ಟ್...ಏನಾಯಿತು ನೀವು ಬೇರೆ ಆದಿರಂತೆ... ಹೌದಾ!? ಇಂತಹ ಅಗಂತುಕ ಪ್ರಶ್ನೆ ಮನಸ್ಸನ್ನು ನೇರ ಘಾಸಿ ಮಾಡಿಬಿಡುತ್ತದೆ. ಕೆಲವು ದಿನಗಳ ಹಿಂದೆ ನಾನು ಒಂದು ಸುದ್ದಿ ಓದಿದೆ. ದ್ವಿತೀಯ ವರ್ಷದ ವೈದ್ಯಕೀಯ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಳು. ಕಾರಣವೆಂದರೆ ತಾನು ತುಂಬಾ ದಪ್ಪ ಇದ್ದೇನೆ ಎಂಬ ಕೀಳರಿಮೆ!! ಹೀಗೆ ಹೇಗಿದ್ದೀರ ಎಂದು ಕೇಳಿದಾಗ ಇದು ಮನಸ್ಸಿನ ಸಂತೋಷ ಮತ್ತು ನೆಮ್ಮದಿಗೆ ಸಂಬಂಧಿಸಿದ ಪ್ರಶ್ನೆ ಆಗಿರಬೇಕು ಹೊರತು ಬಾಹ್ಯ ರೂಪಕ್ಕೆ ಸಂಬಂಧಿಸಿದಂತು ಖಂಡಿತ ಅಲ್ಲ!! ಹೇಗಿದ್ದೀರಾ ಎಂಬುವ ಮಾತಿನಲ್ಲಿ ಕಾಳಜಿ ತುಂಬಿರಬೇಕೆ ಹೊರತು ಕಾರುಬಾರು ಮಾಡುವ ತವಕ ಇರಬಾರದು. ಇನ್ನು ಕೆಲವರನ್ನ ನೋಡಿ ಮತ್ತಷ್ಟು ಮುಂದೆವರೆದು ಹೇಳುತ್ತಾರೆ "ಅವನೆಷ್ಟು ಚೆಂದ!ಎಂತಹ ಕಪ್ಪು ದಪ್ಪ ಹೆಂಡತಿಯನ್ನು ಮಾಡಿಕೊಂಡಿದ್ದಾನೆ...ಪಾಪ ಅಲ್ವಾ " " ಇನ್ನು ಹುಡುಗಿ ಬೆಳ್ಳಗೆ ಇದಾಳೆ , ಗಂಡ ಮಾತ್ರ ತೊಳೆದ ಕೆಂಡ!! ಗಂಡಸಿನ ಬಣ್ಣ ತೆಗೆದುಕೊಂಡು ಏನು ಮಾಡುವುದು ಒಳ್ಳೆಯ ಉದ್ಯೋಗ ದುಡ್ಡು ಉಂಟಲ್ಲ ಅದಕ್ಕೆ ಮದುವೆ ಆಗಿದ್ದು!!" ಅಲ್ಲ ಕೇವಲ ದುಡ್ಡು ಮತ್ತು ಸೌಂದರ್ಯದಿಂದ ದಾಂಪತ್ಯ ಜೀವನ ಸುಖಮಯವಾಗಿ ನಡೆಯಬೇಕೆಂದಿದ್ದರೆ ಸುಂದರ ಯುವತಿಯರು ಯಾರು ನೊಂದುಕೊಳ್ಳುತ್ತಿರಲಿಲ್ಲ! ದುಡ್ಡಿರುವ ಗಂಡನನ್ನು ಯಾವ ಹೆಂಡತಿಯು ಬಿಟ್ಟು ಹೋಗುತ್ತಿರಲಿಲ್ಲ!! ಇದೆಲ್ಲ ಮೂರ್ಖತನದ ಪರಮಾವಧಿಯ ಪ್ರಶ್ನೆ . ಬಾಹ್ಯ ಸೌಂದರ್ಯಕ್ಕಿಂತ ಒಳಗಿನ ಅಸ್ತಿತ್ವ ಮತ್ತು ಲವಲವಿಕೆ ಮುಖ್ಯ! ಮನುಷ್ಯನ ರೂಪರೇಷೆಗಳಿಗಿಂತ ಅವನ ಆತ್ಮದ ಅರಿವು ಮತ್ತು ಸ್ವಭಾವ ಅದನ್ನು ಗುರುತಿಸುವ ಶಕ್ತಿ ಇರಬೇಕು. ಮನುಷ್ಯನ ಅಸ್ತಿತ್ವ ಅವನ ವ್ಯಕ್ತಿತ್ವದಿಂದ ಸಿದ್ದಿಸಬೇಕೆ ಹೊರತು ದೈಹಿಕ ಗುಣಗಳಿಂದ ಅಲ್ಲ! ಮೊನ್ನೆ ಬಳಗದವಳೊಬ್ಬಳು ನನಗೆ ತುಂಬಾ ಬೇಸರದಲ್ಲಿ ಹೇಳಿದಳು . ನಾನು ಕಪ್ಪಗಿದ್ದೇನೆ, ದಪ್ಪಗಿದ್ದೇನೆ... ಕಾಲೇಜಿನಲ್ಲಿ ಎಲ್ಲರೂ ನನ್ನ ಹೀಯಾಳಿಸುತ್ತಾರೆ!! ಯಾವ ಬಟ್ಟೆ ಧರಿಸಿಕೊಂಡರು ನನಗೆ ಚೆಂದ ಕಾಣುವುದೇ ಇಲ್ಲ!! ದೇವರಿಗೆ ನನ್ನ ಮೇಲೆ ಹಾಕಿಷ್ಟು ಸೆಡವು!! ಇಂತಹ ಕಪ್ಪು ಬಣ್ಣವನ್ನು ನನಗೇಕೆ ಕೊಟ್ಟಿದ್ದಾನೆ ಎಂದು... ನನಗೇನು ಹೇಳಬೇಕು ತಿಳಿಯಲಿಲ್ಲ, ಅಲ್ಲ ಹದಿನೆಂಟು ವರ್ಷ ಆ ಹುಡುಗಿ ಸುಂದರವಾದ



ಕಾಲೇಜಿನ ದಿನಗಳನ್ನು, ಉತ್ತಮ ಸ್ನೇಹವನ್ನು ವಿದ್ಯೆಯನ್ನು ಪಡೆಯುವ ಅನುಭವಿಸುವ ಸುವರ್ಣ ದಿನಗಳಲ್ಲಿ ಈ ಹುಡಗಿ ಇಂತಹ ಕಿರಿಕಿರಿಯನ್ನು ಮನಸ್ಸಿಗೆ ಹಚ್ಚಿಕೊಂಡಿರುವುದಲ್ಲ ಎಂದು ಬೇಸರವಾಯಿತು. ಆದರೆ ಅವಳಿಗೆ ಹೇಳಿದೆ ನಾನು ದೇವರು ನಿನಗೆ ಬಣ್ಣ ಕೊಟ್ಟಿಲ್ಲ ಎಂದು ಬೇಸರ ಮಾಡಿಕೊಳ್ಳುತ್ತೀಯ ಕೆಲವರಿಗೆ ಕಣ್ಣು ಕೊಟ್ಟಿಲ್ಲ! ಬಾಯಿ ಕೊಟ್ಟಿಲ್ಲ! ಕಿವಿ ಕೊಟ್ಟಿಲ್ಲ!! ಅವರು ಕೂಡ ದೇವರನ್ನು ದೂರುತ್ತ ನೋವಿನಲಿ ಇರುವರೇ!? ಕುಂಟ ಆಕಳು ಗುಡ್ಡ ಹತ್ತುವಾಗ ಕೋಡಿಲ್ಲದ ಆಕಳು ಒಂಟಿಕೋಡಿನ ಆಕಳು ಗೋಳಾಡಿತ್ತಂತೆ!! ಹಾಗೆ ಸುಮ್ಮನೆ ಬೇರೆಯವರ ಮಾತಿಗೆ ನೋವು ಕೊಳ್ಳಬೇಡ. ಇಂತಹ ವಿಷಯಗಳನ್ನು ಹೇಳುವಾಗ ಕೇಳುವಾಗ ಚಂದ. ಆದರೂ ಇವರು ಹಾಗಿದ್ದಾರೆ, ಹೀಗಿದ್ದಾರೆ ಎಂಬ ಟೀಕೆ ಕೇಳಿದೊಡನೆ ಮನಸ್ಸಿಗೆ ನೋವಾಗುವದಂತು ಖಂಡಿತ! ಅದ್ಯಾಕೋ ಜಗತ್ತಿನಲ್ಲಿ ಸೌಂದರ್ಯಕ್ಕೆ ಅಷ್ಟೊಂದು ಬೆಲೆ ಇದೆಯೋ!? ಈ ವಿಷಯದ ಮೇಲೆ ನನಗೆ ಸರ್ವಜ್ಞನ ಮೇಲೆ ಕೂಡ ಬೇಸರ.

?ತೊಪ್ಪಲು ನೀರು ಕೊನೆಗಬ್ಬು
ಕಣ್ಣಿಗೆ ಒಪ್ಪವಿಲ್ಲದ ನಾರಿ
ಇವು ಜಗದೊಳ್ ಸಪ್ಪೆ ಕಾಣಾ ? ಸರ್ವಜ್ಞ.

ಅಲ್ಲ ಒಬ್ಬ ಚಂದವಾಗಿರುವ ಹುಡುಗ ಕಪ್ಪಗಿದ್ದವಳನ್ನ ದಪ್ಪಗಿದ್ದವಳನ್ನ ಮದುವೆಯಾದರೆ ಏನೂ ತಪ್ಪಿಲ್ಲ!! ಅದೆಂದಿಗೂ ಕೀಳರಿಮೆ ಆಗಬಾರದು. ನಮ್ಮ ರೂಪವೇಷಗಳು ಒಂದು ಭೌತಿಕ ಅಸ್ತಿತ್ವ ಅಷ್ಟೇ ಅದನ್ನೇ ಹಿಡಿದುಕೊಂಡು ತುಂಬಾ ಯೋಚಿಸುವುದು ಮನಸ್ಸಿಗೆ ನೋವು ಮಾಡಿಕೊಳ್ಳುವುದು ಖೇದಕರ.

ಇನ್ನು ಯಾರಾದರೂ ಭೇಟಿಯಾದ ತಕ್ಷಣಕ್ಕೆ ಅವರ ವೈಯಕ್ತಿಕ ವಿಷಯಗಳನ್ನು ಕೇಳುವುದು, " ನಿಮಗೆ ಎಷ್ಟು ಮಕ್ಕಳು!? ಆ ಡಾಕ್ಟರನು ಕಾಣಿ, ಈ ಗುಡಿಗೆ ಹೋಗಿ, ಇಂತಹ ಪೂಜೆ ಮಾಡಿಸಿ" " ನಿಮ್ಮ ಮದುವೆಯಾಗಿದೆಯಾ, ಇನ್ನು ಇಲ್ಲವೇ!? " " ನಿಮ್ಮ ಮಗನ ರಿಸಲ್ಟ್ ಬಂತಾ ?" ಎಲ್ಲವನ್ನು ಎಲ್ಲರಲ್ಲಿ ಹಂಚಿಕೊಳ್ಳಲು ಆಗುವುದಿಲ್ಲ ಅವರ ಮಗನ ರಿಸಲ್ಟ್ ಒಳ್ಳೆಯದಾಗಿ ಬಂದರೆ ಅವರೇ ಸ್ವ ಖುಷಿಯಿಂದ ಹೇಳುತ್ತಾರೆ ಹೇಳದಿದ್ದರೆ ಸುಮ್ಮನೆ ಇದ್ದು ಬಿಡಬೇಕು. ಇನ್ನು ಮಕ್ಕಳಾಗಿಲ್ಲ ಅಂತ ಬಿಟ್ಟಿ ಸಲಹೆ ಬೇಕಾಗಿಲ್ಲ, ಅವರಿಗೆ ಅವರ ಬಗ್ಗೆ ಕಾಳಜಿ ಇರುತ್ತದೆ. ಭೇಟಿಯಾದ ಕೂಡಲೇ ವಯಕ್ತಿಕ ಜ್ಞಾನ ಪ್ರದರ್ಶನ ಬೇಡ!! ಬೇಕಾದಾಗ ಅವರೇ ಕೇಳುವರು. ಅದು ಬಿಟ್ಟು ಅನಗತ್ಯವಾಗಿ ವೈಯಕ್ತಿಕ ವಿಷಯಕ್ಕೆ ಕೈ ಹಾಕಿ ಕದಡಬಾರದು. ಅದರಲ್ಲಿ ಟಿವಿ ಧಾರಾವಾಹಿಗಳಲ್ಲಿ ಬರುವ ಅತಿಯಾದ ಸೌಂದರ್ಯದ ಜಾಹೀರಾತುಗಳನ್ನು ನೋಡಿಬಿಟ್ಟರೆ ಸೌಂದರ್ಯವೆಂಬುವುದೇ ಜೀವನದ ಮುಖ್ಯ ಉದ್ದೇಶ ಎಂಬುವಂತೆ ಬಿಂಬಿಸುತ್ತಾರೆ. ಪ್ರತಿಯೊಂದು ಸಿನಿಮಾಗಳಲ್ಲಿಯೂ ನಾಯಕ,ನಟಿಯ ಸೌಂದರ್ಯಕ್ಕೆ ಸೋತು ಹಿಂದೆ ಹೋಗುವುದನ್ನು ಮುಖ್ಯವಾಗಿ ಸೆರೆ ಹಿಡಿಯುತ್ತಾರೆ... ಅವಳ ಸೌಂದರ್ಯದ ಮೇಲೆ ವಿಪರೀತ ಬಣ್ಣಿಸಿ ಹಾಡುಗಳು!! ಆದರೆ ಸೌಂದರ್ಯ ಎಂಬುದು ಮನುಷ್ಯನ ಸ್ವಭಾವ ಮೂಲ ರೂಪಕ್ಕೆ ಹಾಕಿದ ಒಂದು ಹೊದಿಕೆ ಅಷ್ಟೇ!! ಎಲ್ಲಕ್ಕಿಂತ ಈ ಸೌಂದರ್ಯ ಪ್ರಸಾಧನದ ಉದ್ಯಮೀಕರಣ ಜೋರು. ವಯಸ್ಸಾದರೂ ಸಣ್ಣವರಂತೆ ಕಾಣಬೇಕಾ!?ಮುಖದ ಮೊಡವೆ ಕಲೆಗಳನ್ನು ಹೋಗಿಸಿ ಸ್ಪಾಟ್ಲೆಸ್ ಬ್ಯೂಟಿ ಎನಿಸಿಕೊಳ್ಳಬೇಕಾ!? ಮುಖದ ಮೈಕಾಂತಿ ಹೆಚ್ಚಿಸಬೇಕಾ!?...ಆ ಕ್ರೀಮ್ ಬಳಸಿ ಈ ಕ್ರೀಮ್ ಬಳಸಿ ಎಂದು ಹೇಳುವುದಲ್ಲದೆ ನಿಮ್ಮ ತೂಕವನ್ನು ನಿಯಂತ್ರಿಸಿಕೊಳ್ಳಿ ಎಂಬುದೂ ಕೂಡ!! ನಿಜಕ್ಕೂ ನೀವು ಆರೋಗ್ಯದ ದೃಷ್ಟಿಯಿಂದ ನಿಮ್ಮ ತೂಕವನ್ನು ನಿಯಂತ್ರಿಸಲು ಬಯಸಿದರೆ ಅದರಲ್ಲಿ ತಪ್ಪೇನಿಲ್ಲ!! ಆದರೆ ನೀವು ಚಂದವಾಗಿ ಕಾಣಬೇಕು ದಪ್ಪಗಿದ್ದರೆ ಅಸಹ್ಯ ಎಂದುಕೊಂಡು ನಿಮ್ಮ ತೂಕನ್ನು ಇಳಿಸಿಕೊಳ್ಳಲು ಪ್ರಯತ್ನಿಸಿದರೆ ಅದು ಮೂರ್ಖತನದ ಪರಮಾವಧಿ!! ಇಂತಹ ವಿಚಾರಗಳು ನಮ್ಮನ್ನು ಮಾನಸಿಕವಾಗಿ ಕುಗ್ಗಿಸುತ್ತವೆ. ಈ ಸೌಂದರ್ಯ ಪ್ರಸಾದನಗಳನ್ನು ಮುಖ್ಯವಾಗಿ ಇಟ್ಟುಕೊಂಡು ಜಾಹೀರಾತು ಸಿನೆಮ ಮಾಡುವ ಸೆಲೆಬ್ರಿಟಿಗಳು ಕೇವಲ ನಟನಾಕಾರರು...ನಿಜವಾದ ನಾಯಕರೆಂದರೆ ಸೈನಿಕರು, ವಿಜ್ಞಾನಿಗಳು,ಅವಿಷ್ಕಾರ ಮಾಡಿದವರು. ನಮಗೆ ಕತ್ತಲಾದ ಕ್ಷಣ ಬೆಳಕು ಮೂಡುವಂತೆ ವಿದ್ಯುತ್ತನ್ನು ಕಂಡುಹಿಡಿದವರಾಗಲಿ...ಬಲ್ಬನ್ನು ಕಂಡು ಹಿಡಿದವರಾಗಲಿ... ಇವರ್ಯಾರು ಸೌಂದರ್ಯದ ಹಿಂದೆ ಹೋದವರು ಅಲ್ಲವೇ ಅಲ್ಲ!! ನೀವು ನೋಡಿ ಭೂಮಿಯನ್ನು ಬಿಟ್ಟು ಬಾಹ್ಯಾಕಾಶಕ್ಕೂ ಕಾಲಿಟ್ಟು ಕ್ಷಿಪಣಿಗಳನ್ನು ಕಳಿಸಿ ನೆಟ್ವರ್ಕ್ ತಂತ್ರಜ್ಞಾನವನ್ನು ಸೃಷ್ಟಿಸಿದವರು ಇವರ್ಯಾರು ಸೌಂದರ್ಯದ ಹಿಂದೆ ಬಿದ್ದವರು ಅಲ್ಲವೇ ಅಲ್ಲ!! ಹೀಗಾಗಿ ನೀವು ಭೌತಿಕವಾಗಿ ಹೇಗಿದ್ದೀರ ಎಂಬುದು ಒಂದು ಗೌಣ ಪ್ರಶ್ನೆ ಅದು ಶೂನ್ಯ!, ನಿಮ್ಮ ಭೌತಿಕ ಅಸ್ತಿತ್ವವನ್ನು ಹಿಡಿದುಕೊಂಡು ಯಾರಾದರೂ ಮಾತನಾಡಿದರೆ ಅದು ಅವರ ತಪ್ಪು ಅಂತಹ ಲೋಪವಿರುವ ವ್ಯಕ್ತಿಗಳಿಂದ ದೂರವಿದ್ದು ಬಿಡಬೇಕು. ನಿಮಗೆ ನಿಮ್ಮದೇ ಆದ ವ್ಯಕ್ತಿತ್ವ ಇರಲಿ ಬಾಹ್ಯರೇಖೆಯಿಂದ ನಿಮ್ಮನ್ನು ಗುರುತಿಸುವರಿಂದ ದೂರ ಇದ್ದುಬಿಡಿ. ಜನ ಏನು ಹೇಳುತ್ತಾರೆ ಎಂದು ನಾವು ತೆಳ್ಳಗೆ ಬೆಳ್ಳಗೆ ಆಗಲು ಸಾಧ್ಯವಿಲ್ಲ....

ಅಂಥವರು ನಮ್ಮನ್ನು ದೂರುತ್ತಾರೆ ನಮ್ಮನ್ನು ನೋಡಿ ಅಪಹಾಸ್ಯ ಮಾಡುತ್ತಾರೆ ಎಂದು ಬೇಸರ ಪಡುವಕ್ಕಿಂತ ಅಂತವರಿಂದ ದೂರ ಇರುವದೆ ಚೆಂದ!! ಆದ್ದರಿಂದ ಯಾರನ್ನು ಭೇಟಿಯಾದರೆ "ಹೇಗಿದ್ದೀರಾ!?" ಎನ್ನುವುದು ಅವರ ಆತ್ಮ ಸುಖವನ್ನು ಕೇಳುವ ಪ್ರಶ್ನೆ ಆಗಿರಲಿ ವಿನಃ ವೈಯಕ್ತಿಕವನ್ನು ಕೆದಕುವ ಹುನ್ನಾರ ಬೇಡ. ಯಾರೋ ಭೇಟಿಯಾದ ತಕ್ಷಣ ಯಾಕೆ ನೀವು ಇನ್ನೂ ಮನೆ ಕಟ್ಟಿಲ್ಲವಾ... ನಿಮಗೆ ಇನ್ನೂ ಮಕ್ಕಳಾಗಿಲ್ಲವಾ ಪಾಪ...ಇಂಥ ವೈದ್ಯರ ಬಳಿ ಹೋಗಿ ಇಂತಹ ಪೂಜೆ ಮಾಡಿಸಿ ಎಂಬ ಇಲ್ಲ ಸಲ್ಲದ ಸಲಹೆಗಳನ್ನು ನೀಡುವುದು ತೆಗೆದುಕೊಳ್ಳುವುದು ಎರಡು ತಪ್ಪು , ಸಲಹೆ ಕೇಳದೆ ಅವರು ನಿಮ್ಮ ಬಳಿ ಹೇಳದೆ ಅವರ ಸಮಸ್ಯೆಗೆ ನಿಮಗೆ ತಿಳಿದ ಪರಿಹಾರ ಕೊಡಲು ನೀವು ವೈದ್ಯರಲ್ಲ!! ಯಾರು ಯಾಕೆ ಗಂಡನನ್ನು ಬಿಟ್ಟು ಬಂದು ಇರುವಳು ಅಥವಾ ಅವರ್ಯಾಕೆ ಇನ್ನು ಮನೆ ಕಟ್ಟಿಲ್ಲ ಎಂಬುವುದು ಅದು ಅವರ ಪ್ರಶ್ನೆ ಅವರ ಸಂಸಾರಿಕ ಜೀವನವನ್ನು ಜರಡಿ ಆಡಿಸುವ ಹಕ್ಕು ಬೇರೆಯವರಿಗೆ ಇರುವುದಿಲ್ಲ. ಅದೇ ರೀತಿ ಇಂತಹ ಪ್ರಶ್ನೆಗಳನ್ನು ಯಾರಾದರೂ ಕೇಳಿದರೆ ಉತ್ತರ ಕೊಡುವ ಅಗತ್ಯವೂ ಇರುವುದಿಲ್ಲ. ಮನುಷ್ಯರಾಗಿ ಹುಟ್ಟಿದ ಮೇಲೆ ಮಾನವೀಯತೆ ಮೌಲ್ಯ ಎನ್ನುವುದು ಎಲ್ಲಕ್ಕಿಂತ ಮುಖ್ಯ ಇನ್ನೊಬ್ಬರ ಗುಣ ಸ್ವಭಾವಗಳನ್ನು ಗೌರವಿಸುವುದು ಮತ್ತು ಪ್ರೀತಿಯಿಂದ ಕಾಣುವುದು ಅತಿ ಮುಖ್ಯ. ಹೀಗಾಗಿ?

ನೀವು ಭೌತಿಕವಾಗಿ ಹೇಗಿದ್ದೀರಾ ಎಂಬುದು
ಒಂದು ಗೌಣ ಪ್ರಶ್ನೆ? ಅದು ಶೂನ್ಯ?
ಯಾರಾದರೂ ನಿಮ್ಮ ಭೌತಿಕ ಅಸ್ತಿತ್ವವನ್ನು ಹಿಡಿದು ಮಾತನಾಡಿದರೆ
ಅದು ಅವರ ತಪ್ಪು?
ಅಂತಹ ಲೋಪವಿರುವ ವ್ಯಕ್ತಿಗಳಿಂದ ದೂರವಿದ್ದು ಬಿಡಬೇಕು?
ನಿಮಗೆ ನಿಮ್ಮದೇ ಆದ ವ್ಯಕ್ತಿತ್ವ ಇರಲಿ?ನಾವು ನಮ್ಮನ್ನು ಇತರರ ಕಣ್ಣುಗಳಿಂದ ಅಳೆಯಲು ಶುರು ಮಾಡಿದಾಗಲೇ
ನಮ್ಮ ನೋವು ಆರಂಭವಾಗುತ್ತದೆ?
ವೇದಾಂತವೂ ಅದೇ ಹೇಳುತ್ತದೆ ?
?ನೀನು ದೇಹವಲ್ಲ? ನೀನು ಆತ್ಮ??
ಈ ದೇಹ ?
ಒಮ್ಮೆ ತೆಳ್ಳಗೆ? ಒಮ್ಮೆ ದಪ್ಪ?
ಒಮ್ಮೆ ಕಪ್ಪು? ಒಮ್ಮೆ ಬಿಳಿ ಕೂದಲು?
ಬದಲಾಗುತ್ತಲೇ ಇರುತ್ತದೆ?
ಆದರೆ ಆತ್ಮ ?
ಅದು ಬದಲಾಗುವುದಿಲ್ಲ?
ಅದು ಶಾಶ್ವತ?ಸಾಕ್ರಟೀಸ್ ಹೇಳಿದ್ದು ?
ಮನುಷ್ಯನ ಮೌಲ್ಯ ಅವನ ದೇಹದಲ್ಲಿ ಇಲ್ಲ,
ಅವನ ಚಿಂತನೆಗಳಲ್ಲಿ ಇದೆ?
ಆದ್ದರಿಂದ " ನೀವು ಹೇಗಿದ್ದೀರಾ!? ".... ಎಂಬ ಪ್ರಶ್ನೆಯ ಭಾವ ಬದಲಾಗಲಿ.

# ನಾವೇನು ಕೊಟ್ವಿ..?





| ಸ್ನೇಹಾ ಆನಂದ್

ಸ್ನೇಹ ಲೋಕ

ಜಗತ್ತು ನಮಗೆ ಏನು ಕೊಡ್ತು ಎನ್ನುವುದಕ್ಕಿಂತ ಜಗತ್ತಿಗೆ ನಾವು ಏನು ಕೊಟ್ವಿ ಅಂತ ವಿಚಾರ ಮಾಡಿದರೆ, ಏನೂ ಕೊಟ್ಟಿಲ್ಲ ಅಥವಾ ಮೈನಸ್ ಸೊನ್ನೆ ಕೊಟ್ಟಿದ್ದೀವಿ ಅಲ್ವಾ!

ನಾವು ಕಲಿಯುವ ವಿದ್ಯೆಯೂ ನಮಗಾಗಿಯೇ, ನಮ್ಮ ಸುಖಕ್ಕಾಗಿ, ಜೀವನದಲ್ಲಿ ಶ್ರೀಮಂತಿಕೆ ಹೊಂದಲು ಹೊರತು ದೇಶ ಸೇವೆಗಾಗಿ ಅಲ್ಲ! ಆದರೆ ದೇಶ ಮಾತ್ರ ನಮಗಾಗಿಯೇ ಇದೆ!

ಪ್ರಕೃತಿ ಕೊಟ್ಟಿದ್ದನ್ನು ಹೀರಿಕೊಳ್ಳುವುದು ಅದರ ಬುಡಕ್ಕೆ ಕೊಳ್ಳಿ ಇಡುವುದು ಇಷ್ಟೇ ಗೊತ್ತು ಸ್ವಾರ್ಥ ಮನುಷ್ಯನಿಗೆ!

ವಿಜ್ಞಾನ ಬೆಳೆದಂತೆಲ್ಲ ಜೀವನ ನೈಜತೆಯಿಂದ ದೂರ ಸರಿಯುತ್ತಿದೆ, ಎಲ್ಲರ ಮನಸ್ಸುಗಳು ಬರೀ ಪ್ರಾಕ್ಟಿಕಲ್ ಯೋಜನೆಯನ್ನೇ ಹಾಕುತ್ತದೆ!

ಹಸುಗಳ ಕೆಚ್ಚಲಿಗೆ ಮಶಿನ್ ಹಚ್ಚಿ ಪೂರ್ತಿ ಹಾಲನ್ನು ಖಾಲಿ ಮಾಡುವುದು, ಆ ಸಮಯದಲ್ಲಿ ಅದರ ಸಂಕಟ ಏನಿರುತ್ತದೆಯೋ, ಎಷ್ಟೋ ಪ್ರಾಣಿಗಳನ್ನು ನಮ್ಮ ಆಹಾರಕ್ಕಾಗಿಯೇ ಸಾಕುವುದು!

ಕತ್ತೆ, ಒಂಟೆ, ಹಸು ಇವುಗಳ ಮೇಲೆ ವಿಚಿತ್ರ ಭಾರ ಹಾಕಿ ಕೆಲಸ ಮಾಡಿಸುವುದು! ಹೀಗೆ ಬೇಕಾದಷ್ಟು ಬಳಕೆಯನ್ನು ಮಾಡಿಕೊಳ್ಳುತ್ತೇವೆ!

ಒಂದೆರಡು ಪ್ರಾಣಿ ಎಂದರೆ ನಾಯಿ, ಬೆಕ್ಕು ಮಾತ್ರ ಸುಖದಿಂದ ಜೀವನ ಮಾಡುತ್ತಿವೆ, ಅವುಗಳನ್ನು ಯಾರೂ ಆಹಾರವಾಗಿಸುವುದಿಲ್ಲ ಪುಣ್ಯಕ್ಕೆ! ಅವುಗಳನ್ನು ಮಾತ್ರ ತಮ್ಮ ಪ್ರೀತಿಯ ಪ್ರಾಣಿಗಳಾಗಿ ನೋಡಿಕೊಳ್ಳುತ್ತಾರೆ!

ಇನ್ನು ಕುರಿ,ಕೋಳಿ, ಹಂದಿ, ಹಸು ಇವು ಮನುಷ್ಯರ ತುಳಿತಕ್ಕೆ ಸಿಕ್ಕಿ ಪ್ರಾಣಿಗಳು! ಜೊತೆಗೆ ಎಷ್ಟೋ ಕ್ರಿಮಿ,ಕೀಟಗಳು ಕೂಡ!

ಇದೆಲ್ಲ ಮನುಷ್ಯನ ವ್ಯಕ್ತಿತ್ವದಲ್ಲಿ ಹೇಗೆ ಬಂತೋ ಗೊತ್ತಿಲ್ಲಾ!

ನಮ್ಮ ಮಕ್ಕಳಿಗಾಗಿ ಕರುಣೆಯ ಕಡಲನ್ನೇ ಹರಸುವ ನಾವು ಯಾಕೆ ಪ್ರಾಣಿಗಳ ಬಗ್ಗೆ ನಮ್ಮ ಮನಸ್ಸನ್ನು ಇಷ್ಟು ಕಠಿಣ ಮಾಡಿಕೊಂಡಿದ್ದೇವೆ ಗೊತ್ತಿಲ್ಲ! ನಮ್ಮ ಜೀವನದಲ್ಲಿ ನಾವು ಸಂತೋಷವಾಗಿ ಇದ್ದೇವೆ ಎಂದರೆ ಅದು ಪ್ರಕೃತಿಯ ಕೊಡುಗೆ, ಪ್ರಾಣಿಗಳ ಸಹಾಯದಿಂದ ಮಾತ್ರ!

ಆದರೆ ವಿಜ್ಞಾನಿಗಳು ರೋಬೋಟ್ ಸೃಷ್ಟಿಸುವುದಲ್ಲದೇ ಮನುಷ್ಯರ ಮನಸ್ಥಿತಿಯನ್ನು ರೋಬೋಟ್ ರೀತಿಯಲ್ಲಿ ತಂದು ನಿಲ್ಲಿಸಿದ್ದಾರೆ! ಈಗಂತೂ ೦ ಖ ಬಂದು ಮನುಷ್ಯ ತನ್ನ ಮುಂದಿನ ಪೀಳಿಗೆಗಳನ್ನು ಅಳಿವಿನ ಅಂಚಿಗೆ ತಂದು ಇಟ್ಟಿರಬಹುದು!

ಎಲ್ಲಿಯವರೆಗೆ ಧಾರ್ಮಿಕ ಮನೋಭಾವ,ಕರುಣೆ, ಪ್ರೀತಿ ಮಾನವೀಯತೆ ಉಳಿಯುತ್ತದೆಯೋ ಗೊತ್ತಿಲ್ಲ!

ಯಾವತ್ತೂ ದೇವರ ಸೃಷ್ಟಿಗೆ ನಾವು ಪೂರ್ತಿಯಾಗಿ ಎದುರಾಳಿಯಾಗಿ ನಿಲ್ಲುತ್ತೇವೆಯೋ ಆಗ ಜಗತ್ತು ಪ್ರಳಯವಾದಂತೆಯೇ ಸರಿ! ಒಂದೊಂದು ಸಲ ನನಗೆ ವಿಚಿತ್ರ ಭಾವನೆ ಬರುತ್ತದೆ, ಮಕ್ಕಳಿಗೆ ವಿದ್ಯೆಯ ಹೆಸರಿನಲ್ಲಿ ಬರೀ ದುಡ್ಡಿನ ಆಸೆಯನ್ನೇ ತುಂಬಿಸಿ ಅವರಲ್ಲಿರುವ ವಿಜ್ಞಾನನದ ಜ್ಞಾನವನ್ನು ಹೆಚ್ಚಿಸುತ್ತಾ ಅವರಲ್ಲಿರುವ ಧಾರ್ಮಿಕ ಮನೋಭಾವಕ್ಕೆ ನಾವು ಹಿರಿಯರೇ ಕೊಳ್ಳಿ ಇಡುತ್ತಿರಬಹುದೇನೋ ಎನ್ನುವ ಹೇಳಲಾಗದ ಸಂಕಟ, ತಳಮಳ!

# ಗೃಹಕೃತ್ಯ ಕಾನೂನಿನಲ್ಲಿ ಮಾನ್ಯತೆ



| ವೀಣಾ ಹೇಮಂತ್‌ಗೌಡ ಪಾಟೀಲ್



ಸ್ವಾತಂತ್ರ್ಯ ನಂತರದ ಭಾರತದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಆರ್ಥಿಕವಾಗಿ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಸಬಲರಾಗುತ್ತಿದ್ದಾರೆ. ಶಿಕ್ಷಿತ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದ್ದು ಹೆಣ್ಣು ಮಕ್ಕಳು ವಿವಿಧ ರಂಗಗಳಲ್ಲಿ ತಮ್ಮ ಪ್ರಾಬಲ್ಯವನ್ನು ತೋರುತ್ತಿದ್ದಾರೆ.

ಭೂಗೋಳದಿಂದ ಖಗೋಳದವರೆಗೆ, ಸಮುದ್ರದ ಆಳದಿಂದ ಅಂತರಿಕ್ಷದವರೆಗೆ, ಅಡುಗೆ ಮನೆಯಿಂದ ಸಂಸತ್ ಭವನದವರೆಗೆ ಹೆಣ್ಣು ಮಕ್ಕಳು ದಾಪುಗಾಲಿಕ್ಕಿ ಮುನ್ನಡೆಯುತ್ತಿದ್ದಾರೆ. 'ನ ಭೂತೋ ನ ಭವಿಷ್ಯತಿ' ಎಂಬಂತೆ ಹೆಣ್ಣು ಮಕ್ಕಳ ಸಬಲೀಕರಣವಾಗುತ್ತಿದ್ದರೂ ಕೂಡ ಕೆಲವು ವಿಷಯಗಳಲ್ಲಿ ಮಾತ್ರ ಈ ಹಿಂದೆ ಇದ್ದ ರೀತಿಯಲ್ಲಿಯೇ ಮುಂದುವರೆಸಿಕೊಂಡು ಬರಲಾಗುತ್ತಿತ್ತು.

ಕಾನೂನು, ವೈವಾಹಿಕ ವ್ಯವಸ್ಥೆ, ಹೆಣ್ಣು ಮಕ್ಕಳ ಜನನ, ಹೆಣ್ಣು ಮಕ್ಕಳನ್ನು ದ್ವಿತೀಯ ದರ್ಜೆ ಪ್ರಜೆಗಳಂತೆ ಭಾವಿಸುವ ಲಿಂಗ ಅಸಮಾನತೆ ಮುಂತಾದ ವಿಷಯಗಳಲ್ಲಿ ಇಂದಿಗೂ ಕೂಡ ಕೆಲ ಅಲಿಖಿತ ನಿಯಮಗಳನ್ನು ಪಾಲಿಸುತ್ತಿದ್ದು ಸಮಾಜದಲ್ಲಿ ಅವುಗಳ ನಿರ್ಮೂಲನೆಗೆ ಬಹಳ ಕಾಲದಿಂದಲೂ ಹೋರಾಟ ನಡೆದಿದೆ. ನಿಧಾನವಾಗಿಯಾದರೂ ಜನರು ಸಮಾನತೆಯ ಅರಿವನ್ನು ಹೊಂದುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನಗಳು ಕೂಡ ಅಷ್ಟೇ ಮುಖ್ಯವಾಗಿದ್ದು ಮಹಿಳಾ ಸಬಲೀಕರಣವನ್ನು ಕಾನೂನಾತ್ಮಕವಾಗಿ ಪುರಸ್ಕರಿಸಲಾಗಿದೆ. ಕಳೆದ ಒಂದು ವರ್ಷದಲ್ಲಿ ಬೆಳವಣಿಗೆಗಳನ್ನು ಪಟ್ಟಿ ಮಾಡಿದಾಗ ದೊರೆತ ಮಾಹಿತಿ ಹೀಗಿದೆ.

ಮನೆ ವಾರ್ತೆಯನ್ನು ನೋಡಿಕೊಳ್ಳುವ ಗೃಹಿಣಿ ಸೋಮಾರಿಯಲ್ಲ. ಆಕೆ ಮಾಡುವ ಗೃಹ ಕೃತ್ಯವು ಆಕೆಯ ಪತಿಯ ಕಚೇರಿ ಕಾರ್ಯನಿರ್ವಹಣೆಗೆ ಸಂಪೂರ್ಣವಾಗಿ ಅನುಕೂಲ ಮಾಡಿಕೊಡುತ್ತದೆ... ಕಾರ್ಯಕ್ಷೇತ್ರದಲ್ಲಿನ ಪುರುಷನ ಪ್ರಗತಿಗೆ ಆತನ ಮನೆಂತು ಸಂಪೂರ್ಣ ಜವಾಬ್ದಾರಿಯನ್ನು ವಹಿಸುವ ಪತ್ನಿಯು ಕಾರಣ ಎಂಬುದನ್ನು ಕಾನೂನು ಮಾನ್ಯ ಮಾಡಿದೆ.

ಕೌಟುಂಬಿಕ ದೌರ್ಜನ್ಯ ಕಾಯ್ದೆಯ ಅನ್ವಯ ಹೆಣ್ಣು ಮಕ್ಕಳು ನ್ಯಾಯಾಲಯದಲ್ಲಿ ಕುಟುಂಬದ ತಾತ್ಕಾಲಿಕ ನಿರ್ವಹಣೆಗಾಗಿ ತನ್ನ ಮತ್ತು ತನ್ನ ಮಕ್ಕಳ ಬದುಕಿನ ನಿರ್ವಹಣೆಗಾಗಿ ಪತಿಯಿಂದ ತಾತ್ಕಾಲಿಕವಾಗಿ ನಿರ್ವಹಣಾ ವೆಚ್ಚವನ್ನು ಕೇಳಬಹುದು ಎಂಬುದನ್ನು ಕೂಡ ಕಾನೂನು ಮಾನ್ಯ ಮಾಡಿದೆ.



ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಕೂಡ ಗಂಡು ಮಕ್ಕಳಿಗೆ ಇರುವಷ್ಟೇ ಹಕ್ಕುಗಳು ಇವೆ.

ಪತಿಯಿಂದ ಬೇರ್ಪಟ್ಟ ಸಿಂಗಲ್ ಮದರ್ ಎಂದು ಕರೆಯಲ್ಪಡುವ ಹೆಣ್ಣು ಮಗಳು ತನ್ನ ಮಕ್ಕಳ ಹೆಸರಿನ ಮುಂದೆ ತನ್ನ ಪತಿಯ ಹೆಸರಿನ ಬದಲಾಗಿ ತನ್ನ ಹೆಸರನ್ನು ಹಾಕಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ನೀಡಲಾಗಿದ್ದು ಇದಕ್ಕೆ ಕಾನೂನಿನ ಮಾನ್ಯತೆ ಇದೆ.

ನಿಜವಾದ ಗಳಿಕೆ ಮಾಡುವುದು ಹಾಗೂ ಗಳಿಕೆಯ ಅರ್ಹತೆಯನ್ನು ಹೊಂದಿರುವುದು ಸಮನಲ್ಲ. ಓದಿಕೊಂಡಿದ್ದು ಆರ್ಥಿಕವಾಗಿ ಸಬಲಳಾಗಿರುವ ಹೆಣ್ಣು ಮಕ್ಕಳು ಪತಿಯೊಂದಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಾಗ ಆಕೆಗೆ ನಿರ್ವಹಣಾ ವೆಚ್ಚವನ್ನು ಪಡೆಯುವ ಎಲ್ಲಾ ಹಕ್ಕುಗಳು ಇವೆ. ಆಕೆ ಓದಿದ್ದಾಳೆ ನೌಕರಿ ಮಾಡಿ ಸಂಪಾದಿಸಿ ಖರ್ಚು ವೆಚ್ಚಗಳನ್ನು ನಿಭಾಯಿಸಿಕೊಳ್ಳಬಹುದು. ಎಂಬ ವಾದವನ್ನು ತಿರಸ್ಕರಿಸಲಾಗಿದೆ.

ಹೆಣ್ಣು ಮಗಳ ನ ಕಾರಕ್ಕೆ ಕಾನೂನಿನಲ್ಲಿ ಮಾನ್ಯತೆ ಇದೆ. ವೈವಾಹಿಕ ಸಂಬಂಧದಲ್ಲಾಗಲಿ ಮತ್ತಿತರ ಯಾವುದೇ ರೀತಿಯ ಸಂಬಂಧಗಳಾಗಲಿ ಆಕೆಯ ನಕಾರಕ್ಕೆ ಮಾನ್ಯತೆ ನೀಡಲಾಗತ್ತದೆ.

ಯಾವುದೇ ರೀತಿಯ ದೈಹಿಕ ಸಂಬಂಧವನ್ನು ಹೊಂದುವುದಕ್ಕೂ ಮುನ್ನ ಆಕೆಯ ಸಮ್ಮತಿ/ ಅನುಮತಿಯ ಅವಶ್ಯಕತೆ ಇದೆ.

ಲೈಂಗಿಕ ಕಿರುಕುಳಗಳು ಅಂತರ್ಜಾಲ ಸಂಪರ್ಕದ ಮೂಲಕ ಆನ್ಲೈನ್ ಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯವಹರಿಸುವ ಮೂಲಕ ನೀಡುವ ಕಿರುಕುಳವನ್ನು ಕೂಡ ಕಾನೂನು ಬಾಹಿರ ಎಂದು ಪರಿಗಣಿಸುತ್ತದೆ... ಈ ಕುರಿತು ದೂರನ್ನು ದಾಖಲಿಸಬಹುದು.

ಹೆಣ್ಣು ಮಕ್ಕಳನ್ನು ಮತ್ತಷ್ಟು ಸಶಕ್ತಗೊಳಿಸಲು ಕಳೆದ ವರ್ಷ ಮೇಲಿನ ಎಲ್ಲಾ ಕಾನೂನುಗಳಲ್ಲಿ ಮಹತ್ತರ ಬದಲಾವಣೆಗಳನ್ನು ತರಲಾಗಿದ್ದು ಇವುಗಳ ಮೂಲಕ ದುಷ್ಕೃತ್ಯಗಳನ್ನು ಮಟ್ಟ ಹಾಕಬಹುದು.. ಇವುಗಳ ದುರ್ಬಳಕೆಯಾಗದಂತೆ ತಡೆಯುವುದು ಕೂಡ ಅತ್ಯವಶ್ಯಕವಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,